# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XV - 5-6 ಮೇ - ಜೂನ್ 1997

ಈ ಸಂಚಿಕೆಯಲ್ಲಿ


| | | |
|---|---|---|
| (ಹರಿ) ದಾಸ ಸಾಹಿತ್ಯ | ● ರಮಾಕೃಷ್ಣ | 3 |
| ಅಸಾಧಾರಣ ಮೇಧಾಶಕ್ತಿ - ಶ್ರೀನಿವಾಸ ರಾಮಾನುಜನ್ | ● ಕೃಷ್ಣಸ್ವಾಮಿ | 6 |
| ಕರ್ನಾಟಕದ ಆದರ್ಶನಾರಿ ಅತ್ತಿಮಬ್ಬೆ | *(ಆಧಾರ)* | 9 |
| Strange Coincidences | *(Compiled)* | 10 |
| ಸಂಮೋಹಿನಿ ಚಿಕಿತ್ಸೆ - 16 | ● ಡಾ। ಉಷಾರಾವ್ | 12 |
| ಸುತ್ತ-ಮುತ್ತ | | 14 |


The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

# ಗಣಪತಿಯ ಮೂರನೆ ವಾರ್ಷಿಕೋತ್ಸವ



ಮೈಸೂರು ಅಸೋಸಿಯೇಷನ್ನಿನಲ್ಲಿ ಯೋಗವಿದ್ಯಾ ಗಣಪತಿಯ ಪ್ರತಿಷ್ಠಾಪನೆಯಾಗಿ ಎರಡು ವರ್ಷಗಳು ಕಳೆಯಿತಷ್ಟೆ. ತಾ. 9-5-97 ಅಕ್ಷತೃತೀಯದ ದಿನ ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ವಿನಾಯಕನ ವಾರ್ಷಿಕೋತ್ಸವದ ಅಂಗವಾಗಿ ಆ ದಿನ ಅಸೋಸಿಯೇಷನ್ನಿನಲ್ಲಿ ನಾನಾ ಕಾರ್ಯಕ್ರಮ ಇಟ್ಟುಕೊಳ್ಳಲಾಗಿತ್ತು.

ಮೇ 9ರ ಶುಕ್ರವಾರ ಸಂಜೆ ವಾರ್ಷಿಕೋತ್ಸವದ ಅಂಗವಾಗಿ ಗಣಪತಿಯ ಹೋಮ, ನವಗ್ರಹ ಪೂಜೆ, ವಿನಾಯಕನಿಗೆ ಪಂಚಾಮೃತದ ಅಭಿಷೇಕಗಳು ನಡೆದು ಋತ್ವಿಕ್ಕುಗಳಿಂದ ವೇದ ಘೋಷದೊಂದಿಗೆ ಪೂರ್ಣಾಹುತಿಯಾಯಿತು. ಹೋಮಾದಿ ಕಾರ್ಯಕ್ರಮಗಳನ್ನು ಅಸೋಸಿಯೇಷನ್ನಿನ ಕಾರ್ಯದರ್ಶಿಗಳಾದ ಶ್ರೀ M.A.N. ಪ್ರಸಾದ್ ಮತ್ತು ಭಾರತಿ ಪ್ರಸಾದ್ ನಿಂತು ನಡೆಸಿಕೊಟ್ಟರು. ಬಹು ಸಂಖ್ಯೆಯಲ್ಲಿ ಅಸೋಸಿಯೇಷನ್ನಿನ ಸದಸ್ಯರುಗಳು ಭಾಗವಹಿಸಿ ಅಂದಿನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಮಹಾಮಂಗಳಾರತಿಯ ನಂತರ ಸದಸ್ಯರೆಲ್ಲರಿಗೂ ಗಣೇಶನ ಪ್ರಸಾದವಾಗಿ ಹಬ್ಬದೂಟವಿತ್ತು ಊಟದೊಂದಿಗೆ ಕಾರ್ಯಕ್ರಮ ಮುಕ್ತಾಯ.

— ರಮಾಕೃಷ್ಣ

## ಅಭಿನಂದನೆ !



ಈ ಬಾರಿಯ ಮಾರ್ಚ್ ತಿಂಗಳಿನಲ್ಲಿ ನಡೆದ H.S.C. (Mumbai Board) ಪರೀಕ್ಷೆಯಲ್ಲಿ ಚಿ॥ H. L. ಪ್ರಕಾಶ್ ತೇರ್ಗಡೆಯಾಗಿದ್ದು P.C.M.ನಲ್ಲಿ 279ಅಂಕ (93%)ಗಳಿಂದ ಉತ್ತೀರ್ಣ ಹೊಂದಿರುವುದನ್ನು 'ನೇಸರು' ಅಭಿನಂದಿಸುತ್ತದೆ ! ಚಿ॥ ಪ್ರಕಾಶ್ ನಮ್ಮ ಅಸೋಸಿಯೇಶನ್‌ನ ಅಜೀವ ಸದಸ್ಯರಾದ ಶ್ರೀ H.R.L. ವೆಂಕಟೇಶ್ ಮತ್ತು ಶ್ರೀಮತಿ ಸರೋಜ ವೆಂಕಟೇಶ್‌ರವರ ಪುತ್ರ.

## ಅಭಿನಂದನೆ

### ಬಿ.ಎ. ಸನದಿ ಅವರಿಗೆ ಭೂಸನೂರಮಠ ಸಾಹಿತ್ಯ ಪ್ರಶಸ್ತಿ

ಮುಂಬಯಿ ಹಿರಿಯ ಕನ್ನಡ ಕವಿ ಬಿ. ಎ. ಸನದಿಯವರ ಸಮಗ್ರ ಕಾವ್ಯ ಸಂಪುಟ 'ಸೂರ್ಯಪಾನ'ಕ್ಕಾಗಿ ಅವರಿಗೆ ಧಾರವಾಡದ ಪ್ರಾ. ಸಂ. ಭೂಸನೂರಮಠ ಪ್ರತಿಷ್ಠಾನದ ಈ ಸಲದ ಸಾಹಿತ್ಯ ಪ್ರಶಸ್ತಿ ಪ್ರಾಪ್ತವಾಗಿದೆ. ಹಾಸನದಲ್ಲಿ ಸೇರಿದ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಶ್ರೀ ಚೆನ್ನವೀರಕಣವಿ ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಇತ್ತೀಚೆಗೆ ನಡೆದ ವಿಶೇಷ ಸಮಾರಂಭದಲ್ಲಿ ಕುವೆಂಪು ವಿ. ವಿ. ಮಾಜಿ ಕುಲಪತಿ ಡಾ. ಎಂ. ಆರ್. ಗಜೇಂದ್ರಗಡ ಅವರ ಹಸ್ತದಿಂದ ಸನದಿಯವರಿಗೆ ಹತ್ತುಸಾವಿರ ರೂ.ಗಳ ನಗದು ಬಹುಮಾನದೊಡನೆ ಈ ಪ್ರಶಸ್ತಿಯನ್ನು ನೀಡಲಾಯಿತು. ಭೂಸನೂರು ಮಠ ಪ್ರತಿಷ್ಠಾನದ ಈ ಪ್ರಶಸ್ತಿಯನ್ನು ಈವರೆಗೆ ವಿಮರ್ಶಾಕೃತಿಗಳಿಗೆ ನೀಡುತ್ತಾಬಂದಿದ್ದು ಇದೇ ಮೊದಲಸಲ ಕಾವ್ಯಕೃತಿಯೊಂದಕ್ಕೆ ನೀಡಲಾಗಿದೆ. ಐವತ್ತರ ದಶಕದಲ್ಲಿ ಸನದಿಯವರು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಪ್ರಾ. ಭೂಸನೂರಮಠ ಅವರ ಶಿಷ್ಯರಾಗಿದ್ದ ಸಂಗತಿಯನ್ನೂ ಸ್ಮರಿಸಬಹುದಾಗಿದೆ.

ಕಳೆದ ವರ್ಷ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವಪ್ರಶಸ್ತಿ ಪಡೆದಿದ್ದ ಅನತಿಕಾಲದಲ್ಲೇ ಪ್ರಾ. ಭೂಸನೂರುಮಠ ಪ್ರಶಸ್ತಿಗೆ ಪಾತ್ರರಾದ ಸನದಿಯವರನ್ನು ಧಾರವಾಡದ ಅತ್ಯಂತ ಹಿರಿಯ ಸಾಂಸ್ಕೃತಿಕ ಸಂಸ್ಥೆಯೆನಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಉಪಾಧ್ಯಕ್ಷರಲ್ಲೊಬ್ಬರೆಂದು ನಾಮಕರಣ ಮಾಡಿದ್ದು ವಿಶೇಷ ಸಂಗತಿಯಾಗಿದೆ. ಈ ಬಗ್ಗೆ ಕಳೆದ ದಿ. 30ರಂದು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಸಂಘದ ಗೌರವ ಉಪಾಧ್ಯಕ್ಷರಲ್ಲೊಬ್ಬರೆಂದು ನಾಮಕರಣ ಮಾಡಿದ್ದು ವಿಶೇಷ ಸಂಗತಿಯಾಗಿದೆ. ಈ ಬಗ್ಗೆ ಕಳೆದ ದಿ. 30ರಂದು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಸಂಘದ ಅಧ್ಯಕ್ಷರಾದ ಡಿ. ಪಾಟೀಲ ಪುಟ್ಟಪ್ಪ ಅವರ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಾರಂಭವನ್ನೇರ್ಪಡಿಸಲಾಗಿತ್ತು.

ಬಿ. ಎ. ಸನದಿ ಅವರಿಗೆ 'ನೇಸರು'ವಿನ ಹಾರ್ದಿಕ ಅಭಿನಂದನೆಗಳು.


**MATRIMONIAL**

Matrimonial alliance invited for a fair, Slim, Kannada smartha girl of 26 years 5'-4", Koushika Gotra, Jyestha Nakshtra, III phase, B.Com. working as an officer in reputed Pvt. Organisation. Please write to Box No. 132.

***

Alliance for smarth Brahmin girl, slim, 21 years, 5'-2½" Uttarsahd, Harithsa Gotra, family background stationed at Bombay or near by, contact phone: 711-432384 or write to Box No. 142.


## ತಿದ್ದುಪಡಿ

'ನೇಸರು' ಫೆಬ್ರವರಿ 1997ರಲ್ಲಿ ಪ್ರಕಟವಾದ "ನಾನು ಮತ್ತು ಮೈಸೂರು ಅಸೋಸಿಯೇಶನ್" ನನ್ನ ಈ ಲೇಖನದಲ್ಲಿ 8ಪುಟದಲ್ಲಿ ಪ್ರಾರಂಭದಿಂದ 2ಸಾಲಿನಲ್ಲಿ 1944ನೇ ಇಸವಿ 6ನೇ ತಾರೀಖು ಇರುವ ಜಾಗದಲ್ಲಿ 1944ನೇ ಇಸವಿ ನವೆಂಬರ್ 6ನೇ ತಾರೀಖು ಎಂದು ಓದಿಕೊಳ್ಳಿ.

— ಸಿ. ಕೆ. ಶಂಕರನಾರಾಯಣ ರಾವ್.

# (ಹರಿ) ದಾಸ ಸಾಹಿತ್ಯ

● ರಮಾಕೃಷ್ಣ

ಕರ್ನಾಟಕದಲ್ಲಿ ಹರಿದಾಸರ ಪೀಳಿಗೆಯನ್ನು 9ನೇ ಶತಮಾನದಿಂದ ಗುರುತಿಸುತ್ತಾರೆ.

ಅಚಲಾನಂದದಾಸರು : ಅಚಲಾನಂದ ದಾಸರು ಹೈಗಣಪುರದವರಾಗಿದ್ದು ನೃಸಿಂಹ ಉಪಾಸಕ ರಾಗಿದ್ದರು. ಇವರನ್ನು ಆದ್ಯರ ಪಂಕ್ತಿಯಲ್ಲಿ ಗುರುತಿಸುತ್ತಾರೆ (ಮೊದಲಿಗರು)ಇವರು ತಮ್ಮ ಆರಾಧ್ಯ ದೈವವನ್ನು ಒಂದು ಪಲ್ಲಕ್ಕಿಯಲ್ಲಿಟ್ಟು ಕೊಂಡು ಭಗವನ್ನಾಮ ಸ್ಮರಣೆ ಮಾಡುತ್ತಾ ಹೋಗುತ್ತಿದ್ದರೆ ಆ ಪಲ್ಲಕ್ಕಿಯನ್ನು ಅದೃಷ್ಯರಾಗಿ ಶಿವಗಣಂಗಳು ಹೊತ್ತು ತರುತ್ತಿದ್ದುವಂತೆ. ಜನಕ್ಕೆ ಪಲ್ಲಕ್ಕಿ ಗಾಳಿಯಲ್ಲಿ ತೇಲಿ ತೇಲಿ ಇವರ ಹಿಂದೆ ಹೋಗುತ್ತಿದ್ದಂದು ಕಾಣಿಸುತ್ತಿತ್ತು. ಈ ಆಶ್ಚರ್ಯವನ್ನು ಕಂಡ ಜನ ಇವರನ್ನು ಮಹಾಮಹಿಮರೆಂದು ಗುರುತಿಸುತ್ತಿದ್ದರಂತೆ. ಇವರು ನೇಪಾಳದಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿಯ ರಾಜನ ಮಗ ಸರ್ಪದಂಶ್ಯದಿಂದ ಮೃತನಾತ ನಾದವನನ್ನು ಬದುಕಿಸಿದರಂತೆ. ಅಲ್ಲಿಯ ರಾಜನಿಂದ 12ಕ್ಷೇತ್ರದ ಸಾಲಿಗ್ರಾಮವನ್ನು ಸ್ವೀಕರಿಸಿ ಕರ್ನಾಟಕಕ್ಕೆ ಬಂದರು. ಆಗ ಕರ್ನಾಟಕವನ್ನು ರಟ್ಟರು (ರಾಷ್ಟ್ರ ಕೂಟರು) ಆಳುತ್ತಿದ್ದ ಕಾಲ. ಇವರ ಹಿಂದೆ 96ಕುಟುಂಬದವರು ಶಿಷ್ಯರಾಗಿ ತಿರುಗುತ್ತಿದ್ದರು. ಇವರಿಗೆಲ್ಲಾ ವೃತ್ತಿಯನ್ನು ನಿರ್ಮಿಸಿ ಅಗ್ರಹಾರವನ್ನು ಸ್ಥಾಪಿಸಿ ಕೊಟ್ಟರು (ರಟ್ಟರು)ಈ ಅಗ್ರಹಾರಕ್ಕೆ ನೃಸಿಂಹ ಪುರನೆಂದು ನಾಮಕರಣ ಮಾಡಿದರು. ಈ ವಂಶಜರಲ್ಲಿ ಮುಂದೆ ಮುದ್ದು ವಿಠಲ, ಗೋಪಿನಾಥ, ಹರಿದಾಸ, ತಿಮ್ಮಣ್ಣ ದಾಸರೆಂಬ ಪ್ರಖ್ಯಾತ ಹರಿದಾಸರಾದರು.

ಈ ವಂಶಜರು ಇಂದಿಗೂ ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿದ್ದಾರೆ. ಇವರೆಲ್ಲಾ ಅದ್ವೈತಿಗಳಾಗಿದ್ದು ಸ್ಮಾರ್ತ ಬ್ರಾಹ್ಮಣರು ಹರಿದಾಸ ಪೀಳಿಗೆ ಯವರೆಂದು ಗೋಪೀ ಚಂದನ, ಮುದ್ರೆಗಳನ್ನು ಧರಿಸುತ್ತಾರೆ. ಇವರ ಮನೆಗಳಲ್ಲಿ ಪ್ರತ್ಯೇಕ ದೇವತಾ ಪೂಜೆ ಇಲ್ಲ. ಇವರೆಲ್ಲಾ ಸರದಿಯ ಪ್ರಕಾರ ಅಚಲಾನಂದದಾಸರ ಕರಾರ್ಚಿತವಾದ ವಿಠಲ ನೃಸಿಂಹಾದಿ ದಾಸರ ದೇವತಾ ವಿಗ್ರಹಗಳನ್ನೂ ಅನೇಕಾನೇಕ ಸಾಲಿಗ್ರಾಮಗಳನ್ನೂ ವೈಭವನಾಗಿ ಪೂಜಿಸುತ್ತಾರೆ. ಇದರಲ್ಲಿ ಕಚ್ಚೆಯ ಕೊಳಲ ಗೋಪಾಲನೂ ಇದೆ. ಇಲ್ಲಿ ಅನೇಕಾನೇಕ ವಿಗ್ರಹ ಸಾಲಿಗ್ರಾಮಗಳಿವೆ. ಈ ದೇವಾಲಯಕ್ಕೆ ನೂರೊಂದು ದೇವರ ಹಟ್ಟಿ ಎಂದೂ, ಈ ದೇವಾಲಯದ (ದೇವಾಲಯಕ್ಕಿಂತ ಮನೆ ಎನ್ನುವುದೇ ಸರಿ) ಬೀದಿಗೆ ನೂರೊಂದು ದೇವರ ಬೀದಿ ಎಂದೂ, ಈ ಮನೆತನದವರನ್ನು ನೂರೊಂದು ದೇವರ ಮನೆತನದವರೆಂದು ಇಂದಿಗೂ ಕರೆಯುತ್ತಾರೆ.

ಅಚಲಾನಂದ ವಿಟ್ಠಲನೆಂಬ ಅಂಕಿತದಿಂದ ಇವರು ತಮ್ಮ ಕೃತಿಗಳನ್ನು ರಚಿಸಿದ್ದಾರೆ.

ನರಹರಿತೀರ್ಥರು : ಇವರು ಒರಿಸ್ಸಾದವರು ಗಜಪತಿರಾಜನಾಳುತ್ತಿದ್ದ ಕಾಲದಲ್ಲಿ ಆತನ ಆಸ್ಥಾನದಲ್ಲಿ ದಫ್ತರರಾಗಿದ್ದವರು. ಮಧ್ವಾಚಾರ್ಯರು ಬದರಿಗೆ ಹೋಗುವ ದಾರಿಯಲ್ಲಿ ಒರಿಸ್ಸಾದಲ್ಲಿ ತಂಗಿದ್ದಾಗ ಇವರ ದ್ವೈತಮತದ ಪ್ರಚಾರದಿಂದ ಆಕರ್ಷಿತರಾಗಿ ಇವರ ಶಿಷ್ಯರಾಗಿ ಸನ್ಯಾಸ ಸ್ವೀಕರಿಸಿದರು. ಇವರು ಶಾಸ್ತ್ರ ಪಂಡಿತರು ಕಾರಣಾಂತರಗಳಿಂದ ಇವರು ಗಜಪತಿ ರಾಜನ ಮರಣಾನಂತರ ಆತನ ಮಗ ಪ್ರಾಪ್ತ ವಯಸ್ಕನಾಗುವವರೆಗೆ ರಾಜ್ಯಭಾರವನ್ನು ನಡೆಸಿ ಅವನು ಪ್ರಾಪ್ತ ವಯಸ್ಕನಾದಮೇಲೆ ರಾಜ್ಯವನ್ನು ಆತನಿಗೆ ವಹಿಸಿ ಭಂಡಾರದಲ್ಲಿದ್ದ ಮೂಲರಾಮ ವಿಗ್ರಹವನ್ನು ಬಹುಮಾನವಾಗಿ ಪಡೆದು ಉಡುಪಿಗೆ ಬಂದರು. ಇವರು ಭಾಗವತ ಧರ್ಮದ ಕೀರ್ತನ ಪದ್ಧತಿಗೆ ಪುರಸ್ಕಾರವಿತ್ತು ದೇವರ ನಾಮಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ಇವರ ರಚನೆಯಲ್ಲಿ ಮುಖ್ಯವಾಗಿ ಸಿಕ್ಕಿರುವುದು. `ಎಂತು ಮರುಳಾದೆ' ಮತ್ತು `ಹರಿಯೇ ಇದು ಸರಿಯೆ"ಎಂಬ ಕೀರ್ತನೆಗಳು ಪ್ರಮುಖವಾದವು. ಪ್ರಾಕೃತ ಭಾಷೆಯಲ್ಲಿ ತಮ್ಮ ರಚನೆಯನ್ನು ಮಾಡಿ ಹರಿದಾಸ ಸಾಹಿತ್ಯಕ್ಕೆ ನಾಂದಿ ಹಾಕಿದವರೆಂದು ಇವರಿಗೆ ಹರಿದಾಸ ಪಂಕ್ತಿಯಲ್ಲಿ ಅಗ್ರಸ್ಥಾನವಿದೆ.

ಶ್ರೀಪಾದರಾಯರು :

ಹರಿದಾಸ ಪೀಳಿಗೆಯನ್ನು ಕಥನ ಮಾಡಲು ಹೊರಟರೆ ಮೊದಲು ಅವರ ಹೆಸರನ್ನು ಹೇಳಬೇಕಾಗುತ್ತದೆ. ಭಾಗವತ ಧರ್ಮ ಪ್ರಚಾರಕ್ಕೂ, ಕೀರ್ತನ ಪದ್ಧತಿಗೂ ಮುಖ್ಯ ಕಾರಣಕರ್ತರಾದ್ದರಿಂದ ಕರ್ನಾಟಕ ಕೀರ್ತನಕಾರರು ಭಜನೆ ಮಾಡಲಿ, ಕೀರ್ತನ ಮಾಡಲಿ ಮೊದಲು ಶ್ರೀ ಪಾದ ರಾಯರನ್ನು ವಂದಿಸುತ್ತಾರೆ.

"ನಮಃ ಶ್ರೀ ಪಾದರಾಜಾಯ । ನಮಸ್ತೇ ವ್ಯಾಸಯೋಗಿನೇ ।

ನಮಃ ಪುರಂದರಾರ್ಯಾಯ । ವಿಜಯ ರಾಜಾಯತೇ ನಮಃ ।

ಇಲ್ಲಿ ಹರಿದಾಸ ಸಾಹಿತ್ಯಕ್ಕೆ ಅಸ್ತಿಭಾರ ಹಾಕಿದ ಶ್ರೀಪಾದರಾಯರು ಮೊದಲು, ನಂತರ ದಾಸ ಕೂಟವನ್ನು ಕಟ್ಟಿ ಬೆಳಸಿದ ವ್ಯಾಸರಾಯರು, ಅನಂತರ ಹರಿದಾಸರ ಆಧ್ವರ್ಯರು (ಪ್ರಮುಖರು) ಪುರಂದರದಾಸರು. ನಂತರ ಪುರಂದರದಾಸರ ಸಾಹಿತ್ಯವನ್ನು ಕ್ರೋಢೀಕರಿಸಿ ದಾಸ ಕೂಟಕ್ಕೆ ಸೇವೆ

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For
INDIAN AIR LINES,
EAST WEST,
MODI LUFT &
JET AIRLINES

REGD. OFFICE:
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
ALSO AT:
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ಸಲ್ಲಿಸಿದ ವಿಜಯದಾಸರು ದಾಸ ಕೂಟದವರಿಗೆ ವಂದ್ಯರು.

ಶ್ರೀ ಪಾದರಾಯರು ಮೈಸೂರು ಸೀಮೆಯಲ್ಲಿಯ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಅಬ್ಬೂರೆಂಬ ಗ್ರಾಮದವರು. ಇವರ ತಂದೆಯ ಹೆಸರು ಶೇಷಗಿರಿ ಆಚಾರ್ಯ. ತಾಯಿ ಗಿರಿಯಮ್ಮ. ಈ ಬಡದಂಪತಿಗಳಿಗೆ ಒಬ್ಬನೇ ಮಗನಾಗಿ ಹುಟ್ಟಿದ ಲಕ್ಷ್ಮೀನಾರಾಯಣ. ಅಬ್ಬೂರಿನ ಬಳಿ ಇದ್ದ ಹುಲಿಗುಡ್ಡದ ಮಠದಲ್ಲಿ ವಾಸವಾಗಿದ್ದ ಪುರುಷೋತ್ತಮ ತೀರ್ಥರನ್ನು ಭೇಟಿ ಮಾಡಲು ಹೊರಟಿದ್ದ. ಸ್ವರ್ಣವರ್ಣ ತೀರ್ಥರಿಗೆ ಬಾಲಕ ಲಕ್ಷ್ಮೀ ನಾರಾಯಣನ ಭೇಟಿ ದಾರಿಯಲ್ಲೇ ಆಗುತ್ತದೆ. ಆತನ ಚುರುಕು ಬುದ್ಧಿ ಆಕರ್ಷಕ ವ್ಯಕ್ತಿತ್ವ ಸ್ವರ್ಣವರ್ಣ ತೀರ್ಥರನ್ನು ಆಕರ್ಷಿಸುತ್ತದೆ. ಅವರು ಅವನ ತಂದೆ, ತಾಯಿಗಳನ್ನೊಪ್ಪಿಸಿ ಬಾಲಕನಿಗೆ ಉಪನಯನಾದಿಗಳನ್ನು ಮಾಡಿಸಿ ವಿದ್ಯಾಭ್ಯಾಸಕ್ಕೂ ಏರ್ಪಾಡಿಸುತ್ತಾರೆ. ನಂತರ ಬಾಲಕ ಲಕ್ಷ್ಮೀನಾರಾಯಣ ಶ್ರೀ ಪಾದರಾಜನಾಮದಿಂದ ಸ್ವರ್ಣವರ್ಣರಿಂದ ಸನ್ಯಾಸ ಸ್ವೀಕಾರ ಮಾಡುತ್ತಾರೆ.

ತಮ್ಮ ಆಶ್ರಮ ಗುರುಗಳಾದ ಸ್ವರ್ಣವರ್ಣರೊಂದಿಗೆ ಶ್ರೀ ರಂಗದಲ್ಲಿ ಇರುವ ಅವಕಾಶ ಇವರದಾಗುತ್ತದೆ. ಶ್ರೀ ರಂಗವು ರಾಮಾನುಜ ಸಂಪ್ರದಾಯದ ವೈಷ್ಣವರಿಗೆ ಭೂವೈಕುಂಠ. ಆಳ್ವಾರರ ಪಾಶುರಗಳ ಸಂಕಲನ ನಡೆದದ್ದು ಶ್ರೀ ರಂಗದಲ್ಲೇ ಪ್ರಚಾರ ನಡೆದದ್ದೂ ಶ್ರೀ ರಂಗದಲ್ಲೇ ಶ್ರೀ ರಂಗದ ದೇವಾಲಯದಲ್ಲಿ ಮೊದಲನೆಯ ಕುಲೋತ್ತುಂಗ ಚೋಳನ ಕಾಲದಲ್ಲಿ ಕ್ರಿಸ್ತಾಬ್ದ 1117ರಷ್ಟು ಹಿಂದೆಯೇ ತಮಿಳು ಪ್ರಬಂಧಗಳನ್ನು ವೇದಮಂತ್ರಗಳಿಗೆ ಸಮನಾಗಿ ಹಾಡುವ ವಾಡಿಕೆ ಇದ್ದಿತು. ಈ ಪದ್ಧತಿ ಕಾಲಕ್ರಮದಲ್ಲಿ ತಪ್ಪಿಹೋಗಿ, ರಾಮಾನುಜ ಸಂಪ್ರದಾಯದಲ್ಲಿ ಸುಪ್ರಸಿದ್ಧ ಸಂತರಾದ ವೇದಾಂತ ದೇಶಿಕರು 1360ರ ಅಂಶ ಸುಮಾರಿಗೆ ಮತ್ತೆ ಈ ಪದ್ಧತಿಯನ್ನು ಬಳಕೆಗೆ ತಂದರೆಂದು ತಿಳಿದು ಬರುತ್ತದೆ. ಶ್ರೀ ಪಾದರಾಯರು ತಮ್ಮ ಆಶ್ರಮ ಗುರುಗಳಾದ ಸ್ವರ್ಣವರ್ಣ ತೀರ್ಥರೊಂದಿಗೆ ಶ್ರೀರಂಗಕ್ಕೆ ಬರುವ ಮುಂಚೆಯೇ ತಮಿಳು ಪ್ರಬಂಧಗಳ ಮೇಲೆ ರಾಮಾನುಜರ ಶಿಷ್ಯರಾದ 'ತಿರುಕ್ಕುರು ಕೈಪಿರಾನ್ ಪಿಳ್ಳೈ' ಮತ್ತು 'ನಂಜೀಯಾರ್ (ವೇದಾಂತಿ ಜೀಯರ್) ಪೆರಿಯ ಅಚ್ಚಾನ್ ಪಿಳ್ಳೈ ! 'ಪರಕ್ಕಾ ತಿರುವೀಥಿ ಪಿಳ್ಳೈ' ಮೊದಲಾದವರು ವ್ಯಾಖ್ಯಾನ ರಚಿಸಿ (1220ರಿಂದ 360ರ ವರೆಗೆ) ಪ್ರಬಂಧಗಳ ಪ್ರಚಾರಕ್ಕೆ ನೆರವಾಗಿದ್ದರು. ಶ್ರೀಪಾದರಾಯರು ತಮಿಳು ಪ್ರಬಂಧಗಳ ಸವಿಯನ್ನು ಆಸ್ವಾದಿಸದಿರಲು ಸಾಧ್ಯವಿಲ್ಲ. ಶ್ರೀಪಾದರಾಯರ ರಚನೆಗಳಲ್ಲಿ ತಮಿಳು ಪ್ರಬಂಧಗಳ ಪ್ರಭಾವವಿದೆ ಎನ್ನುತ್ತಾರೆ. ಇದಲ್ಲದೆ ಶ್ರೀ ಪಾದರಾಯರ ಕಾಲದಲ್ಲೇ ಶ್ರೀ ರಂಗದಲ್ಲಿ ಮತ್ತೊಂದು ಪದ್ಧತಿ ಮೊದಲಾಯಿತು. ಇದು (ಇಯರ್) ಮತ್ತು (ಇಳ್ಳೈ) ಎಂಬ ಪ್ರಕಾರಗಳಲ್ಲಿರುವ ಭೇದವನ್ನು ಕುರಿತದ್ದು. ತಮಿಳಿನಲ್ಲಿ 'ಅಯಲ್' ಎಂದರೆ ಸಾಹಿತ್ಯ ಪ್ರಧಾನವಾದ ವೈದೀಕ ವಾಙ್ಮಯದ ಪ್ರಭಾವವನ್ನೊಳಗೊಂಡ ಪಾಠ ಕ್ರಮ; ವೇದ ಮಂತ್ರವನ್ನು ಹೇಳುವಂತೆ; ಉಚ್ಚಾರಣೆಯ ಕಡೆ ಗಮನವಿರಿಸಿ ತಮ್ಮ ಕಲ್ಪನೆಗೆ ಅವಕಾಶವಿಲ್ಲದೆ ತಮಿಳು ಪದಗಳನ್ನು ಪಠಿಸುವುದು. ಇದು 'ಇಯಲ್, ಸೇವೈ ಎನಿಸಿಕೊಳ್ಳುತ್ತದೆ. ದೇವರ ಉತ್ಸವ ಗುಡಿಯಿಂದ ಬಿಜಯ ಮಾಡುವಾಗ ಹಲವು ಪಾಠಕರು ಸಾಲಾಗಿನಿಂತು ಈ ಪದ್ಧತಿಯನ್ನು ಓದಿದು ಪಾಠ ಮಾಡುತ್ತಾ ಉತ್ಸವದ ಜೊತೆ ನಡೆದು ಹೋಗುವರು. ನಿರ್ದಿಷ್ಟವಾದ ಪಾಠಕ್ರಮವಿರುವುದರಿಂದ ಗೋಷ್ಠಿಯಲ್ಲಿ ಈ ಸೇವೆ ಸಲ್ಲಿಸುವರು. ಇನ್ನೊಂದು ಪ್ರಕಾರ 'ಇಳ್ಳೈ' ಸಂಗೀತ ಪ್ರಕಾರವಾದುದು ತಮಿಳು ಪ್ರಬಂಧಗಳನ್ನು ರಾಗತಾಳಗಳಲ್ಲಿ ಹಾಡುವರು. ಸಂಗೀತದ ವಾದ್ಯಗಳೊಂದಿಗೆ ಸೇರಿಸುವರು. ಇಲ್ಲಿ ರಾಗ ವಿಸ್ತಾರ, ಕಲ್ಪನೆಗಳಿಗೆ ಅವಕಾಶವುಂಟು. ಕೆಲವು ವೇಳೆ ಹಾಡುವವರು ಅಭಿನಯ ಮಾಡುವುದೂ ಉಂಟು. ಶ್ರೀಪಾದರಾಯರು ಈ ಪದ್ಧತಿಯನ್ನು ಕಣ್ಣಾರೆ ನೋಡಿರಬೇಕು. ಅವರ 'ಲಕ್ಷ್ಮೀನೃಸಿಂಹಪ್ರಾದುರ್ಭಾವ ದಂಡಕ' ಎನ್ನುವ ರಚನೆ ಪಾಠಪ್ರಧಾನವಾದ 'ಇಯಲ್', ಪ್ರಕಾರಕ್ಕೆ ಹೊಂದಿಕೊಳ್ಳುವುದನ್ನು ಗಮನಿಸಬಹುದು. ಉಳಿದ ಪದಗಳು, ಸುಳಾದಿಗಳು ಗೇಯ ರೂಪಕವಾದ 'ಇಳ್ಳೈ' ಪ್ರಕಾರಕ್ಕೆ ಸೇರುವುವು.

ಶ್ರೀರಂಗದ ಪ್ರಭಾವದಿಂದಲೇ ಶ್ರೀಪಾದರಾಯರು ತಮ್ಮ ರಚನೆಗಳಲ್ಲಿ ಅಂಕಿತವನ್ನು 'ರಂಗವಿಠಲ'ನೆಂದು ಗ್ರಹಿಸಿರಬೇಕು. ಇದಕ್ಕೆ ನಿದರ್ಶನವಾಗಿ ಶ್ರೀರಂಗನಾಥನ ವರ್ಣನೆಯಾದ 'ಶ್ರೀ ರಂಗವಿಠ'ಲನ ಮುಕುಟಕ್ಕೆ ಶರಣು' ಎಂಬ ಕೃತಿಯನ್ನು ನೋಡಬಹುದು. ಸ್ವರ್ಣವರ್ಣರು ಕಾಲವಾದ ಮೇಲೆ ಶ್ರೀಪಾದರಾಯರು ಮುಳುಬಾಗಿಲಿಗೆ ಬಂದು ತಮ್ಮ ಮಠವನ್ನು ಏರ್ಪಡಿಸಿಕೊಂಡರು. ಕರ್ನಾಟಕದಲ್ಲಿ ಈ ವೇಳೆಗೆ ಸಂಸ್ಕೃತದ ಜಾಗದಲ್ಲಿ ಪ್ರಾಕೃತ ಭಾಷೆಯನ್ನು ಉಪಯೋಗಿಸಲು ಜೈನ ಸಾಹಿತಿಗಳೂ, ವೀರಶೈವರ ವಚನ ಸಾಹಿತಿಗಳೂ, ಪ್ರಾರಂಭ ಮಾಡಿಯಾಗಿತ್ತು. ಆದರೂ ವೈದೀಕ ಸಂಪ್ರದಾಯ ಸ್ತರಲ್ಲಿ ಇನ್ನೂ ಸಂಸ್ಕೃತವೇ ಪ್ರಧಾನ ಭಾಷೆಯಾಗಿತ್ತು. ಹಾಗೂ ಸಂಸ್ಕೃತದ ಅತಿರೇಕ ಎಷ್ಟಿತ್ತೆಂದರೆ ಸ್ನಾನಾನಂತರ ಪ್ರಾಕೃತ ಭಾಷೆಯಲ್ಲಿ ಮಾತನಾಡುವುದೂ ಸಹ ಮೈಲಿಗೆ ಎಂಬಷ್ಟು ಅತಿರೇಕವಾಗಿತ್ತು. ಶ್ರೀಪಾದರಾಯರು ಶ್ರೀ ರಂಗದಲ್ಲಿ ತಮಿಳು ಭಾಷೆಗೆ ನಿರ್ವಾಣಭಾಷೆಯಷ್ಟೇ ಮಾನ್ಯತೆ ದೊರಕಿದ್ದು ಕಂಡಿದ್ದರು. ಹಾಗೂ ಶ್ರೀ ವೈಷ್ಣವ ಪ್ರಬಂಧಗಳಿಗೆ ದ್ರಾವಿಡವೇದವೆಂಬ ಪೂಜ್ಯ ನಾಮಕರಣವಾಗಿದ್ದನ್ನು ಕಂಡಿದ್ದರು ಹಾಗೂ ತಮಿಳರ ಸ್ವಭಾಷಾ ಪ್ರೇಮದಿಂದ ತಮಿಳು ಗ್ರಂಥಗಳು ವಿಪುಲವಾಗಿ ಬೆಳೆದಿದ್ದನ್ನು ನೋಡಿದ್ದರು. ಹಾಗೂ ತಮಿಳು ಪ್ರಬಂಧಗಳಂತೆ ಕನ್ನಡದಲ್ಲೂ ಇದ್ದರೆ ಭಾಗವತ ಧರ್ಮಪ್ರಚಾರಕ್ಕೆ ಅನುಕೂಲವೆಂದು ಮನಗಂಡರು. ಇದರಿಂದ ಸಾಮಾನ್ಯ ಜನತೆಯ ಉದ್ಧಾರವೂ ಸಾಧ್ಯವೆಂದು ತಿಳಿದು ತಾವೇ ಕನ್ನಡದಲ್ಲಿ ನೂರಾರು ದೇವರ ನಾಮಗಳನ್ನು ರಚಿಸಿ ಭಾಗವತರ ತಂಡವನ್ನು ಸಿದ್ಧಪಡಿಸಿ ವೈದಿಕ ಪಂಡಿತರಿಂದ ವೇದಪಾರಾಯಣ ಮಾಡಿಸುವಂತೆಯೇ, ಭಾಗವತರ ಮುಖದಿಂದ ಕನ್ನಡದ ದೇವರ ನಾಮಗಳನ್ನು ಹಾಡಿಸುತ್ತಿದ್ದರು. ಪೂಜಾ ಕಾಲದಲ್ಲಿ ಅದರಲ್ಲೂ ಮಠದಲ್ಲಿ ! ಕನ್ನಡದ ದೇವರನಾಮಗಳನ್ನು ರಚಿಸಿ ಅದನ್ನು ಹಾಡಿಸುವುದೇನು ಕಡಿಮೆ ಸಾಹಸದ ಕೆಲಸವಾಗಿರಲಿಲ್ಲ. ಶ್ರೀಪಾದರಾಯರಂತಹ ಸಂಸ್ಥಾನಾಧೀಶರೂ ಪಂಡಿತೋತ್ತಮರೂ ಇಂತಹ ಕೆಲಸ ಮಾಡಿದಾಗ ಜನಸ್ವಾಮಿಗಳನ್ನು ಏನೆಂದು ಭಾವಿಸಿರಲಿಕ್ಕಿಲ್ಲ? ಎಷ್ಟು ವಿರೋಧಗಳು ಹುಟ್ಟಿರಲಿಕ್ಕಿಲ್ಲ?

ಶ್ರೀಪಾದರಾಯರು ಪೂಜಾ ಕಾಲದಲ್ಲಿ ಹಾಡಿಸುತ್ತಿದ್ದ ಹಾಡುಗಳೆಂದರೆ ತಾವೇ ರಚಿಸಿದ 'ಭ್ರಮರಗೀತಾ' 'ವೇಣುಗೀತಾ', 'ಗೋಪೀ ಗೀತಗಳು' ಈ ಹಾಡುಗಳಾದರೋ ಭಗವಂತನ ಲೀಲೆಗಳಿಂದ ಕೂಡಿದ ಭಕ್ತಿ ಪ್ರಧಾನವಾದ ಎಂತಹ ನಾಸ್ತಿಕರನ್ನೂ ಆಸ್ತಿಕರನ್ನಾಗಿ ಮಾಡಬಲ್ಲಂತಹ; ಆ ಬಾಲ ವೃದ್ಧರಿಗೂ ಅರ್ಥವಾಗುವಂತಹ ಸರಳ ಕನ್ನಡದ ರಚನೆಗಳು. ಒಮ್ಮೊಮ್ಮೆ ಶ್ರೀ ಪಾದರಾಯರೇ ಭಗವಂತನೆದುರಿಗೆ ಕೀರ್ತನ ಸೇವೆಗೆ ನಿಲ್ಲುತ್ತಿದ್ದರಂತೆ. ಸುಶ್ರಾವ್ಯವಾದ ಕಂಠದಿಂದಲೂ ಭಕ್ತಿ ಭಾವದಿಂದಲೂ ತನ್ಮಯರಾಗಿ ಹಾಡುತ್ತಾ ನರ್ತನ ಸೇವೆಯನ್ನು ಮಾಡುತ್ತಿದ್ದರಂತೆ. ಇದನ್ನು ನೋಡಲು ಹಾಗೂ ಕೇಳಲೆಂದು ಜನ ದೂರ ದೂರದಿಂದ ಬರುತ್ತಿದ್ದುದೂ ಉಂಟು. ಅರಸು ಸಾಳ್ವ (ಸಳುವ)ನರಸಿಂಹ ಚಂದ್ರಗಿರಿಯರಸನಾಗಿದ್ದ ಕಾಲದಲ್ಲಿ ತಿರುಪತಿಯ ಅರ್ಚಕವರ್ಗದವರ ಅತ್ಯಾಚಾರಗಳನ್ನು ಸಹಿಸದೆ ಇವರ ಕಗ್ಗೊಲೆ ನಡೆಸಿದರು. ಈ ಬ್ರಹ್ಮಹತ್ಯಾಪಾತಕವನ್ನು ಈತನಿಗೆ ಹೋಗಲಾಡಿಸಿ ಚಂದ್ರಗಿರಿಯ ಸಿಂಹಾಸನಾರೋಹಣವನ್ನು ಶ್ರೀಪಾದರಾಯರು ಮಾಡಿದ್ದರೆಂದು ತಿಳಿದು ಬರುತ್ತದೆ. (ಕರ್ನಾಟಕ ಭಕ್ತ ವಿಜಯ) ಶ್ರೀ ಪಾದರಾಯರಿಂದ ಕನ್ನಡ ವಾಙ್ಮಯಕ್ಕೆ ಅಪಾರವಾದ ಕೊಡುಗೆ ದೊರೆತಿದೆ. ಇವರಿಂದಲೇ ಹರಿದಾಸ ಸಾಹಿತ್ಯ ಪ್ರಾರಂಭವಾಯ್ತು. ನೂರಾರು ದೇವರ ನಾಮಗಳನ್ನು ರಚಿಸಿ ಹೆಂಗಸರು, ಶ್ರೀ ಸಾಮಾನ್ಯರು ಇದನ್ನು ಹಾಡುವಂತೆ ಮಾಡಿದರು. ಅವರ ದೇವರ ನಾಮಗಳು ಸೇಲಂ, ಕೊಯಮತ್ತೂರು, ಕೋಲಾರ ಜಿಲ್ಲೆಗಳಲ್ಲಿ ಪ್ರಚಾರದಲ್ಲಿವೆ.

ಇವರು ಮುಖ್ಯವಾಗಿ ಭಾವುಕರು, ಭಕ್ತರು, ಕವಿಗಳು ವಾಗ್ಗೇಯಕಾರರು, ಸಂಸ್ಕೃತದಲ್ಲಿನ ವೃತ್ತನಾಮ ಪದ್ಧತಿಯನ್ನನುಸರಿಸಿ ಕನ್ನಡದಲ್ಲಿ ವೃತ್ತನಾಮಗಳನ್ನು ರಚಿಸಿದವರು. ರಾತ್ರಿಯ ವೇಳೆ ಸ್ವಾಮಿಗಳು ನಡೆಸುವ ಪೂಜೆಯಲ್ಲಿ ಬಳಕೆಗೆ ಬರುವಂತಹ ಹಲವಾರು ವೃತ್ತನಾಮಗಳನ್ನು ಇವರೇ ರಚಿಸಿರುವರು. ಸುಳಾದಿಗಳ ಬಾಹುಳ್ಯವೂ ಇವರದೇ 133ಸುಳಾದಿಗಳನ್ನು ರಚಿಸಿದ್ದಾರಂತೆ. 3ಉಗಾಭೋಗಗಳೂ ಇವೆ, ಇವರು ಕನ್ನಡದಲ್ಲಿ ಗೋಪಿಗೀತಾ, ಭ್ರಮರ ಗೀತಾ, ರುಕ್ಮಿಣೀ ಸತ್ಯಭಾಮವಿಲಾಸ, ಲಕ್ಷ್ಮೀನೃಸಿಂಹಪ್ರಾದುರ್ಭಾವ ದಂಡಕ ಸಂಸ್ಕೃತದಲ್ಲಿ ವಾಗ್ವಜ್ರವೆಂಬ ಗ್ರಂಥವನ್ನು ರಚಿಸಿದ್ದಾರೆ.

ಶ್ರೀಪಾದರಾಯರ ಭೃಂಗಗೀತ ರಾಗ-ಮುಖಾರಿ
ತಾಳ -ಅಟ್ಟತಾಳ

ಭೃಂಗ ನಿನ್ನಟ್ಟಿ ಬಂದನೇ |
ಭೃಂಗ ನಿನ್ನಟ್ಟಿ ಬಂದನೇ ಶ್ರೀ | ರಂಗ ಮಧುರೆಲಿ ನಿಂದು |
ಅಂಗಜ ಉಬ್ಬುಕಪೋಲಗೋ ||ಪ||
ಅಂಗಳ ತಡೆಯನಿಕ್ಕಿ |ಅಂಗನೇ ರಂಜೋ ಹುಳ್ಳೆ ವ್ಯ|
ಗಂಗಳನೆ
ಗುರಿ ಯಟ್ಟ | ಓಂಗಿಸು ತ್ವೆದನೇ ಅಸುವಾ |
ನಾಕಿತಾ ವಾ

೧ ಚರಣ :- ನಿನ್ನ ನೋಡೆ ನಮ್ಮ ಅಟ್ಟ | ತನ್ನ ಕಂಡಂತಾಯಿ
ತಯ್ಯೋ | ಚೆನ್ನಿಗರರಸ ಕುಶಲೋನ್ನರೆಯ ಅಹನೇನೋ |
ಚಿಣ್ಣತನ ಮೊದಲಾಗ |ವನ್ನ ಕಿಕಬಿಲ್ಲೆವೋ |
ಗನ್ನ ಚಿತ್ತ ಚೋರನ್ನ | ಶ್ರೀ ಹರಿಯ || ಮನ್ನಣೆಗೆ ಮೆಚ್ಚಿ
ತನ್ನವ ನೊಪ್ಪಿಸಿದ ಮುಗುದ | ಹೆಣ್ಣುಗಳ ನಿರಹಾಟ್ಟಿ |
ಯನ್ನ ದಾಟಿಬಿಡೆನೆಂದು, ತನ ನೇಹ ವೆಂಬ ನದಿ |
ಯನ್ನೇರಿಸಿ ಪೋಗದಿನ್ನ | ದಿನಿ ರೊಳು ತೋರದೋದನೇ
ಏಕಿತವಾ ||

ಕೊನೆ ಚರಣ

(9) ಹಂಗೇಕೇದೊಂದಾಗಿ ಅಂತ | ರಂಗ ದರಶ ನಾಚಿದ |
ಮಂಗಳ ಚರಿತೆಯನ್ನು|
ಸಂಗೀತ ದಿಂ ಪೊಗಳುತ್ತ | ಕಂಗಳಶ್ರುಗಳೆವುತ್ತ |
ಇಂಗಿತಜ್ಞ ದೇವನಂಗ |
ಸಂಗದಾನಂದದ ನೆನೆದು | ಶ್ರೀ ಹರಿಯಂ | ಮಂಗಳ
ವೇದಸ್ವೀಕಾರಿ |
ಶೃಂಗಾರ ಕೊರು ಮ ನಮ್ಮ |
ಶೃಂಗಸ್ಥಾನ ಶಿಖ್ಯ ನರ |ಸಿಂಗ ವಿಟು ಭಾರ್ಗವನೆ|
ಅಂಗದ ಪಾರ್ಥ ಪಾಲುತು |
ರಂಗನ ರಂಗ ವಿಠಲ | ತುಂಗ ಮಹಿಮ ನಮೋ
ಎಂಬೆವೋ | ಏ ಕಿತವಾ ||

1480ರಲ್ಲಿ ಮುಳುಬಾಗಿಲಿನ ಹತ್ತಿರ ನರಸಿಂಹ ತೀರ್ಥದಲ್ಲಿ ಶ್ರೀಪಾದರಾಯರು ತೀರಿಕೊಂಡರು.

(ಮುಂದುವರಿಯುವುದು.)

## ಅಗಲಿಕೆ



**ಕೆ. ಎಸ್. ವಾಸುದೇವ ಮೂರ್ತಿ**

ಮೈಸೂರು ಅಸೋಸಿಯೇಶನ್ನಿನ ಕಾನೂನು ಸಲಹೆಗಾರರಾಗಿದ್ದ ಶ್ರೀ ಕೆ. ಎಸ್. ವಾಸುದೇವ ಮೂರ್ತಿ ಅವರು ಇದೇ ಜೂನ್ 10ರಂದು ಬೆಂಗಳೂರಿನಲ್ಲಿ ಕೆಲಸಮಯ ಅಸ್ವಸ್ಥರಾಗಿದ್ದು ನಿಧನರಾದರು.

1952ರಲ್ಲಿ ಬೆಂಗಳೂರಿನಿಂದ B.Com. ಮುಗಿಸಿಕೊಂಡು ಮುಂಬಯಿಗೆ ಬಂದು ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಕೆಲಸ ಮಾಡಲಾರಂಭಿಸಿದರು. ಹಾಗೆಯೇ ಕೆ. ಸಿ. ಕಾಲೇಜಿನಲ್ಲಿ L.L.B. ಓದಿ ಮುಂದೆ ಅಡ್ವೊಕೇಟ್‌ರಾದರು. ಅವರು MACT ಮತ್ತು BAR ASSOCIATIONನ ಪ್ರೆಸಿಡೆಂಟ್‌ರಾಗಿದ್ದರು.

ಅವರು ಅನೇಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಸ್ಥೆಗಳೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದರು. ಕನ್ನಡ ಸಾಹಿತ್ಯ ಸಂಗೀತ ಕಲಾಕ್ಷೇತ್ರದ ಆರಂಭಿಕ ಸದಸ್ಯರಾದ ಅವರು ಕರ್ನಾಟಕಸಂಘ ಹಾಗೂ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಉಪಾಧ್ಯಕ್ಷರೂ ಆಗಿದ್ದರು ಮತ್ತು ತಮಿಳು ಸಂಘ ಹಾಗೂ ಬಂಟರ ಅಸೋಸಿಯೇಶನ್ನಿನಲ್ಲೂ ಅವರು ಸಕ್ರಿಯ ಸದಸ್ಯರಾಗಿದ್ದರು. ಚೆಂಬೂರಿನ ಲಯನ್ಸ್ ಕ್ಲಬ್‌ನ ಸದಸ್ಯರೂ ಆಗಿದ್ದರು.

ಅವರಿಗೆ ಸಂಗೀತ ಹಾಗೂ ಲಲಿತ ಕಲೆಯಲ್ಲಿ ತೀವ್ರ ಆಸಕ್ತಿಯಿತ್ತು. ಕರ್ನಾಟಕದಿಂದ ಅನೇಕ ಕಲಾಕಾರರನ್ನು ಕರೆಸಿ ಕನ್ನಡ ಸಾಹಿತ್ಯ ಸಂಗೀತ ಕಲಾಕ್ಷೇತ್ರದ ಮೂಲಕ ಮುಂಬಯಿಯ ಕಲಾಪ್ರೇಮಿಗಳಿಗೆ ಪರಿಚಯಿಸಿಕೊಟ್ಟಿದ್ದಾರೆ.

ಅವರಿಗೆ ಕ್ರೀಡಾ ಕೂಟಗಳಲ್ಲೂ ಆಸಕ್ತಿಯಿತ್ತು. ತಮ್ಮ ಕಾಲೇಜು ದಿನಗಳಲ್ಲಿ ಅವರು ಜಿಲ್ಲಾ ಹಾಗೂ ರಾಜ್ಯ ಮಟ್ಟದ ಹಾಕಿ ಆಟಗಾರರಾಗಿದ್ದರು.

'ನೇಸರು' ಅವರ ಮನೆಯವರಿಗೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಹಾರೈಸುತ್ತದೆ.

# ಅಸಾಧಾರಣ ಮೇಧಾಶಕ್ತಿ - ಶ್ರೀನಿವಾಸ ರಾಮಾನುಜನ್

• ಎನ್. ಕೃಷ್ಣಸ್ವಾಮಿ

ಶ್ರೀನಿವಾಸ ರಾಮಾನುಜನ್ ವಿಭೂತಿಪುರುಷರ ಸಾಲಿಗೆ ಸೇರಿದವನು. ಇವನ ಜೀವನಚರಿತ್ರೆಯನ್ನು ಓದಿದ ಹಾಗೆಲ್ಲ ನಮ್ಮ ವಿಸ್ಮಯ ಉಕ್ಕುತ್ತದೆ : ಭಾರತೀಯರ ಹೆಮ್ಮೆ ಬೀಗುತ್ತದೆ - ನಮ್ಮವನೊಬ್ಬ ಇಂತಹ ಸತ್ವಶಾಲಿಯಾದನಲ್ಲ, ಎಂದು ಭಗವಂತನ ವಿಚಿತ್ರ ಸೃಷ್ಟಿಯನ್ನು ಕಂಡು ನಾವು ವಿಸ್ಮಿತ ಮೂಕರಾಗುತ್ತೇವೆ.

22ಡಿಸೆಂಬರ್ 1887ರಂದು ಈರೋಡಿನಲ್ಲಿ ಜನಿಸಿದ ರಾಮಾನುಜನ್ (ಇನ್ನು ಮುಂದೆ ಶ್ರೀನಿವಾಸ ಎಂಬ ಹೆಸರಿನ ಭಾಗವನ್ನು ಬಿಟ್ಟುಬಿಡುತ್ತೇನೆ)ನ ಜನ್ಮಶತಾಬ್ದಿಯನ್ನು ಗಣಿತಶಾಸ್ತ್ರಜ್ಞರು ಪ್ರಪಂಚದಲ್ಲೆಲ್ಲ ಆಚರಿಸಿದರು. ತಾಯಿ ಕೋಮಲತ್ತಮ್ಮಾಳ್‌ಗೆ ಈ ಚೊಚ್ಚಲ ಮಗುವಿನ ಮೇಲೆ ಬಹು ಅಭಿಮಾನ, ಪ್ರೇಮ. ರಾಮಾನುಜನಿಗೂ ತಾಯಿಯ ಮೇಲೆ ಅಸಾಧಾರಣ ಭಕ್ತಿ, ಪ್ರೀತಿ, ತಂದೆ ಕುಪ್ಪುಸ್ವಾಮಿ ಶ್ರೀನಿವಾಸ ಅಯ್ಯಂಗಾರ್ ಸೀರೆ ಅಂಗಡಿಯ ಗುಮಾಸ್ತ, ತಿಂಗಳಿಗೆ ಹದಿನೈದು ರೂಪಾಯಿ ಸಂಬಳದ ಬಡಪಾಯಿ. ಮಗನ ಮೇಲೆ ಈತನ ಪ್ರಭಾವ ಅಷ್ಟಕ್ಕಷ್ಟೆ. ರಾಮಾನುಜನ ಜೀವನದಲ್ಲಿ ತಾಯಿಯದೇ ಹಿರಿಯ ಪ್ರಭಾವ. ತಾಯಿ ನಾಮಕ್ಕಲ್ ನಾಮಗಿರಿ ದೇವಿಯ ಭಕ್ತೆ. ನಾಮಗಿರಿಯ ಪ್ರಸಾದದಿಂದಲೇ ತನಗೆ ರಾಮಾನುಜನ್ ಸಿಕ್ಕಿದನೆಂದು ಆಕೆಯ ದೃಢ ವಿಶ್ವಾಸ.

1898ರಲ್ಲಿ ರಾಮಾನುಜನ್ ಕುಂಭ ಕೋಣಂ ಹೈಸ್ಕೂಲಿನ ವಿದ್ಯಾರ್ಥಿಯಾದ, ವಯಸ್ಸು ಹನ್ನೊಂದು. ಈ ವಯಸ್ಸಿನಲ್ಲಿ ಆಗಲೇ ಆತನ ಗಣಿತಶಾಸ್ತ್ರದ ಜ್ಞಾನ ಬೆಳಕಿಗೆ ಬರುತ್ತಿತ್ತು.

ಒಂದು ದಿನ ಮೇಷ್ಟರು ಯಾವುದೇ ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಭಾಗಿಸಿದರೆ ಫಲಿತಾಂಶ 1ಎಂದು ಹೇಳಿದಾಗ ರಾಮಾನುಜನ್ ಹಾಗಾದರೆ 0÷0=1 ಆಗುತ್ತದೆಯೇ ಎಂದು ಕೇಳಿದ. ಈ ಪ್ರಶ್ನೆಗೆ ಉತ್ತರ ಕೊಡುವವರು ಯಾರು? ಅವನ ಸಹಪಾಠಿಗಳೆಲ್ಲ ಅವನಿಂದ ಗಣಿತದಲ್ಲಿ ಸಹಾಯ ಪಡೆಯುತ್ತಿದ್ದವರು. ಯಾವ ಗಣಿತದ ಸಮಸ್ಯೆಯನ್ನೂ ಅವನು ಲೀಲಾಜಾಲವಾಗಿ ಪರಿಹರಿಸುತ್ತಿದ್ದ. ಕಾಲೇಜು ವಿದ್ಯಾರ್ಥಿಗಳೂ ಅವನೊಡನೆ ತಮ್ಮ ಗಣಿತಶಾಸ್ತ್ರದ ಸಮಸ್ಯೆಗಳನ್ನು ಚರ್ಚಿಸುತ್ತಿದ್ದುದರಿಂದ ಹನ್ನೆರಡು ವರ್ಷವಾಗಿದ್ದಾಗಲೇ ರಾಮಾನುಜನಿಗೆ ಪ್ರೌಢ ಗಣಿತಶಾಸ್ತ್ರದ ಪರಿಚಯವೂ ಲಭಿಸಿತು. ಕಾಲೇಜು ಲೈಬ್ರರಿಯ ಗಣಿತಶಾಸ್ತ್ರದ ಪುಸ್ತಕಗಳನ್ನು ಇವನು ಓದಿ ಜೀರ್ಣಿಸಿಕೊಂಡಿದ್ದ.

1903ರಲ್ಲಿ ಮೆಟ್ರಿಕ್ಯುಲೇಷನ್ನಿನಲ್ಲಿ ಪ್ರಥಮದರ್ಜೆಯಲ್ಲಿ ಪಾಸಾದ ರಾಮಾನುಜನ್ ಕುಂಭಕೋಣದ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದ. ಈ ವೇಳೆಗಾಗಲೇ ಅವನು ಕಾರ್ ಎಂಬಾತನ ಗಣಿತಶಾಸ್ತ್ರದ ಗ್ರಂಥವನ್ನು ಓದಿ ಅದರಲ್ಲಿದ್ದ ಪ್ರಮೇಯಗಳನ್ನು ಅರಗಿಸಿಕೊಂಡು ಸಮಸ್ಯೆಗಳಿಗೆ ಉತ್ತರವನ್ನು ಕಂಡು ಹಿಡಿದು ಅಂತಹುದೇ ಇತರ ಪ್ರಮೇಯಗಳನ್ನು ತಾನೇ ರಚಿಸತೊಡಗಿದ್ದ. ಇದೇ ಇವನ ಪ್ರತಿಭಾಶಕ್ತಿಯ ಪ್ರಥಮ ಫಲ.

ಆದರೆ ಗಣಿತ ಪ್ರಪಂಚದಲ್ಲಿಯೇ ಮುಳುಗಿಹೋಗಿದ್ದ ರಾಮಾನುಜ ಇತರ ವಿಷಯಗಳನ್ನು ಓದಲೇ ಇಲ್ಲ. ಎಫ್.ಎ. ಪರೀಕ್ಷೆಯಲ್ಲಿ ಇಂಗ್ಲಿಷ್‌ನಲ್ಲಿ ಫೇಲ್ ಆದ. ವಿದ್ಯಾರ್ಥಿವೇತನವೂ ಹೋಯಿತು, ಎರಡು ವರ್ಷದ ನಂತರ ಮತ್ತೆ ಪರೀಕ್ಷೆಯಲ್ಲಿ ಅಪಜಯ! ಈ ಅಪಮಾನವನ್ನು ತಾಳಲಾರದೆ ರಾಮಾನುಜ ಮನೆಬಿಟ್ಟು ಓಡಿಹೋದ. ಅವನನ್ನು ಹುಡುಕಿ ಸಮಾಧಾನ ಮಾಡಿ ಮತ್ತೆ ಮನೆಗೆ ಕರೆತಂದರು.

1906ರಲ್ಲಿ ಕುಂಭಕೋಣಂ ಬಿಟ್ಟು ಮದರಾಸಿನಲ್ಲಿ ಪಚ್ಚೆಯಪ್ಪ ಕಾಲೇಜಿನಲ್ಲಿ ಓದು ಮುಂದುವರಿಯಿತು. ಇಲ್ಲಿಯೂ ಅವನ ಗಣಿತದ ಅಸಾಧಾರಣ ಪ್ರತಿಭೆ ಉಪಾಧ್ಯಾಯರ ಗಮನ ಸೆಳೆಯಿತು. ಇಲ್ಲಿ ಪ್ರಾಣಿಶಾಸ್ತ್ರದಲ್ಲಿ ಫೇಲ್ ಆಯಿತು. ಪ್ರಾಣಿಗಳನ್ನು ಕೊಂದು ಅವುಗಳ ಶರೀರರಚನೆಯನ್ನು ಅಧ್ಯಯನ ಮಾಡುವುದು ಅಹಿಂಸಾಪರನಾದ ರಾಮಾನುಜನಿಗೆ ಬೇಡವಾಗಿತ್ತು. ಗಣಿತವಲ್ಲದೆ ಬೇರೆ ಯಾವ ವಿಷಯವೂ ಅವನನ್ನು ಆಕರ್ಷಿಸಲಿಲ್ಲ. ಹೀಗೆ ರಾಮಾನುಜ ಎಫ್.ಎ.ಗಡಿಯನ್ನು ಇಲ್ಲಿಯೂ ದಾಟಲಾಗಲಿಲ್ಲ.

ಆದರೆ ರಾಮಾನುಜ ಇಷ್ಟು ಕಾಲವೂ ತನ್ನ ಗಣಿತದ ವ್ಯವಸಾಯವನ್ನು ಮುಂದುವರಿಸುತ್ತಲೇ ಇದ್ದ. ಹೊಸ ವ್ಯಾಸಂಗಗಳು, ಹೊಸ ಪ್ರಮೇಯಗಳು ಅವನ ಫಲವತ್ತಾದ ಮೆದುಳಿಗೆ ಗೋಚರಿಸುತ್ತಲೇ ಇದ್ದುವು. ಕಾಲೇಜು ವ್ಯಾಸಂಗದ ಐದು ವರ್ಷಗಳಲ್ಲಿ ಅವನ ಗಣಿತಶಾಸ್ತ್ರದ ಜ್ಞಾನ ನಾಗಾಲೋಟದಿಂದ ಮುಂದೆ ಓಡಿತು. ಹಲವಾರು ದಶಕಗಳಲ್ಲಿ ಯೂರೋಪಿನ ಅತಿ ಪ್ರತಿಭಾಶಾಲಿಗಳು ಸಾಧಿಸಿದ ಕಾರ್ಯವನ್ನೆಲ್ಲ ಕೆಲವೇ ವರ್ಷಗಳಲ್ಲಿ ಕರಗತ ಮಾಡಿಕೊಂಡು ಅವುಗಳ ಆಧಾರದ ಮೇಲೆ ಗಣಿತವನ್ನು ಅಭಿವೃದ್ಧಿ ಮಾಡಿದ. ಇದೆಲ್ಲವನ್ನೂ ಏಕಾಂಗಿಯಾಗಿ, ಯಾರ ಬೆಂಬಲವೂ ಇಲ್ಲದೆ ಮಾಡಿದುದು ಹಿಂದೆ ಎಂದೂ ನಡೆಯದಂತಹ ಅದ್ಭುತ ಪವಾಡವೇ ಸರಿ.

ರಾಮಾನುಜನ ತಾಯಿ ಜಾನಕಿ ಎಂಬ ಹುಡುಗಿಯನ್ನು ಇವನಿಗೆ ಕಟ್ಟಿದರು. ಅವಳಿಗೆ ಆಗ ಒಂಬತ್ತು ವರ್ಷ ವಯಸ್ಸು. ಈ ಹೆಚ್ಚಿನ ಜವಾಬ್ದಾರಿ ಬೇರೆ ರಾಮಾನುಜನಿಗೆ ಭಾರವಾಯಿತೇ ಹೊರತು ಮದುವೆಯಿಂದ ಅವನು ಯಾವ ಸುಖವನ್ನು ಪಡೆದಂತೆ ತೋರುವುದಿಲ್ಲ.

ಹೈಡ್ರೋಸೀಲ್ ಖಾಯಿಲೆಗೆ ಆಪರೇಷನ್ ನಡೆಯಿತು.

ನೌಕರಿಯ ಶಿಕಾರಿ ಆರಂಭವಾಯಿತು. ಮದರಾಸಿನ ಬೀದಿಬೀದಿ ಅಲೆದು ಕಂಡಕಂಡವರನ್ನು ನೌಕರಿಗಾಗಿ ಬೇಡಿದ. "ಗೆಲಿಲಿಯೋ ಧಾರ್ಮಿಕ ಚಿತ್ರಹಿಂಸೆಯಿಂದ ಸತ್ತಂತೆ ನಾನು ಬಡತನದ ಬವಣೆಯಿಂದ ಸಾಯುವ ಸ್ಥಿತಿಗೆ ಬಂದಿದ್ದೇನೆ" - ಎಂದು ಹೇಳುತ್ತಿದ್ದ, ರಾಮಾನುಜ, ಅವನ ಆರೋಗ್ಯ ಕೆಟ್ಟಿತು. ಆಗ ಸ್ನೇಹಿತರು ಅವನ ಸಹಾಯಕ್ಕೆ ಬಂದರು. ಅವನ ಗಣಿತ ಶಾಸ್ತ್ರದ ಪ್ರತಿಭೆಯನ್ನು ಗುರುತಿಸಿದವರು ಅವನು ರಚಿಸಿದ ಗಣಿತದ ಹಸ್ತಪ್ರತಿಗಳನ್ನು ಪ್ರತಿಷ್ಠಿತ ವ್ಯಕ್ತಿಗಳಿಗೆ ತೋರಿಸಿ ಕೆಲಸ ಗಳಿಸಲು ಯತ್ನಿಸಿದುದು ವಿಫಲವಾಯಿತು. ಮಂಗನ ಕೈಲಿ ಮಾಣಿಕ್ಯ ಕೊಟ್ಟರೆ ಅದಕ್ಕೆ ಏನು ಬೆಲೆ? ಕೊನೆಗೆ ರಾಮಚಂದ್ರರಾವ್ ಎಂಬ ಗಣ್ಯವ್ಯಕ್ತಿಗೆ ಇವನ ಅಸಾಧಾರಣ ಪ್ರತಿಭೆಯ ಬಗೆಗೆ ನಂಬಿಕೆ ಬಂದಿತು, ಏಕೆಂದರೆ ಈತನಿಗೆ ಗಣಿತದ ಗಂಧ ಸ್ವಲ್ಪ ಇದ್ದಿತು.

'ನೌಕರಿ ಕೊಡಿಸಿ, ನನ್ನ ಗಣಿತದ ಕೃಷಿ ಮುಂದುವರಿಸುತ್ತೇನೆ' - ಎಂದು ರಾಮಾನುಜ ಬೇಡಿದ. ರಾಮಚಂದ್ರರಾಯರು ಅವನಿಗೆ ಮಾಸಾಶನ ತಿಂಗಳಿಗೆ 25 ರೂಪಾಯಿಗಳನ್ನು ಕಳುಹಿಸತೊಡಗಿದರು. ಅವರ ಸಹಾಯಕ್ಕಾಗಿ ರಾಮಚಂದ್ರರಾಯರಿಗೆ ಭಾರತೀಯರೆಲ್ಲ ಕೃತಜ್ಞರಾಗಿರಬೇಕು. ಈ ಬೆಂಬಲದಿಂದ ರಾಮಾನುಜ ತನ್ನ ಕೆಲಸವನ್ನು ಮುಂದುವರಿಸಿದ ಅವನ ಮೊದಲ ಗಣಿತ ಪ್ರಬಂಧ ಪ್ರಕಟವಾಯಿತು, -ಭಾರತೀಯ ಗಣಿತ ಸಂಘದ ಪತ್ರಿಕೆಯಲ್ಲಿ .

1912ರಲ್ಲಿ ರಾಮಚಂದ್ರರಾಯರ ಪ್ರಭಾವದಿಂದ ರಾಮಾನುಜನಿಗೆ ಮದರಾಸು ಪೋರ್ಟ್ ಟ್ರಸ್ಟಿನಲ್ಲಿ ಗುಮಾಸ್ತನ ಕೆಲಸ ದೊರೆಯಿತು. ಸಂಬಳ 30ರೂಪಾಯಿ. ಕೆಲಸ ಹೆಚ್ಚಿರಲಿಲ್ಲ. ರಾಮಾನುಜ ಆಫೀಸಿನಲ್ಲಿಯೂ ಮನೆಯಲ್ಲಿಯೂ ಹೆಚ್ಚು ಹುರುಪಿನಿಂದ ಗಣಿತದ ಕೆಲಸ ಮುಂದುವರಿಸಿದ ಕಾಗದಕ್ಕೆ ಹಣ ಖರ್ಚು ಮಾಡದೆ ಸ್ಲೇಟು, ಬಳಪ, ಅಲ್ಲಿ, ಇಲ್ಲಿ ದೊರೆತ ಪುಡಿಕಾಗದಗಳ ಮೇಲೆ ಲೆಕ್ಕ ಮಾಡಿದ. ರಾತ್ರಿ ನಿದ್ದೆಗೆಡುತ್ತಿದ್ದ - "ಕನಸಿನಲ್ಲಿ ಏನೋ ಹೊಳೆಯಿತು. ಅದು ನೆನಪಿನಿಂದ ಅಳಿಸಿಹೋಗಬಾರದು ಎಂದು ಆಗಲೇ ಎದ್ದು ಕುಳಿತು ಬರೆಯುತ್ತಿದ್ದೆ !"

ಅವನ ಮೇಲಧಿಕಾರಿಯಾಗಿದ್ದ ನಾರಾಯಣ ಅಯ್ಯರ್ ಅವರಿಗೂ ಗಣಿತಶಾಸ್ತ್ರದಲ್ಲಿ ಪ್ರವೇಶ ಇತ್ತು. ಅವರು ಭಾರತೀಯ ಗಣಿತಶಾಸ್ತ್ರ ಸಂಸ್ಥೆಯ ಕಾರ್ಯದರ್ಶಿ. ಆದರೆ ರಾಮಾನುಜನ ಕೆಲಸ ಅವರ ಅಳತೆಯ ಪ್ರಮಾಣವನ್ನೂ ಮೀರಿದ್ದಿತು. ಅವರು ರಾಮಾನುಜನಿಗೆ ಆಪ್ತ ಗೆಳೆಯರಾದರು.

ಈ ಸಮಯದಲ್ಲಿ ರಾಮಾನುಜ ತನ್ನ ಕಾರ್ಯವನ್ನು ಗಣಿತಶಾಸ್ತ್ರ ತಜ್ಞರ ಗಮನಕ್ಕೆ ತರಲು ಯತ್ನಿಸಿದ. ಇದಕ್ಕೆ ಅವನ ಹಿತಚಿಂತಕರೂ ಸಹಾಯ ಮಾಡಿದರು. ಆದರೆ ಅವನ ಕಾರ್ಯದ ಘನತೆ ಎಂತಹುದೆಂದರೆ ಮದರಾಸಿನ ಪ್ರೊಫೆಸರುಗಳಿಗೂ ಅದರ ಅರ್ಥ ಆಗಲಿಲ್ಲ. ಆಗ ಇಂಗ್ಲೆಂಡಿನ ತಜ್ಞರೇ ಇವನ ಕೆಲಸದ ಮಾಪನ ಮಾಡಬಲ್ಲರೆಂದು ತೋರಿತು.

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರ ಪ್ರೊಫೆಸರಾಗಿದ್ದ ಜಿ. ಎಚ್. ಹಾರ್ಡಿಗೆ 1912ರಲ್ಲಿ ರಾಮಾನುಜ ಪತ್ರ ಬರೆದು ತನ್ನ ಕೆಲಸದ ಮಾದರಿಗಳನ್ನು ಕಳುಹಿಸಿದ.

ಗಣಿತಶಾಸ್ತ್ರದ ಅದೃಷ್ಟ, ಪ್ರೊ|| ಹಾರ್ಡಿ ಸಾಮಾನ್ಯ ವಿಜ್ಞಾನಿಯಾಗಿರಲಿಲ್ಲ. ಅಸಾಧಾರಣ ಮೇಧಾವಂತ. ಅಷ್ಟೇನಿಗರ್ವಿ, ಮಾತ್ಸರ್ಯಹೀನ ಗುಣಗ್ರಾಹಿ.

ರಾಮಾನುಜನ ಪತ್ರ, ಅವನ ವಿಚಿತ್ರವಾಗಿ ತೋರುವ ಗಣಿತದ ಕೆಲಸ ಹಾರ್ಡಿಯನ್ನು ಆಕರ್ಷಿಸಿದವು. ಅವನು ರಾಮಾನುಜನೊಡನೆ ಪತ್ರವ್ಯವಹಾರ ನಡೆಸಿದ.

ಇದರ ಫಲ - ಮದರಾಸು ವಿಶ್ವವಿದ್ಯಾಲಯದ ಮೇಲೆ ತನ್ನ ಪ್ರಭಾವ ಬೀರಿ ಹಾರ್ಡಿ ರಾಮಾನುಜನನ್ನು ಕೇಂಬ್ರಿಜ್‌ಗೆ ಕರೆಸಿಕೊಂಡ.

ತಾಯಿ ಕೋಮಲತ್ತಮ್ಮಾಳ್ ಮಗನನ್ನು ಸಾಗರದಾಚೆಯ ವಿದೇಶಕ್ಕೆ ಕಳುಹಿಸಲು ಒಪ್ಪಲಿಲ್ಲ. ಆದರೆ ಅವಳ ಆರಾಧ್ಯ ದೈವವಾದ ನಾಮಗಿರಿಯಮ್ಮನೇ ಆಕೆಗೆ ಆದೇಶ ಇತ್ತಮೇಲೆ ಒಪ್ಪಿದಳು.

1912ರಿಂದ 1914ರ ಎರಡು ವರ್ಷಗಳಲ್ಲಿ ರಾಮಾನುಜನಿಗೆ ಮದರಾಸು ವಿಶ್ವವಿದ್ಯಾಲಯದ ಪ್ರೊಫೆಸರುಗಳ ಪರಿಚಯವೂ ಆಗಿತ್ತು. ಕೇಂಬ್ರಿಜ್‌ನ ಪ್ರೊ|| ನೆವಿಲ್ ಮದರಾಸಿಗೆ ಭೇಟಿಕೊಟ್ಟಾಗ ರಾಮಾನುಜನನ್ನು ಸಂಧಿಸಿದ ಅವನ ಅಸಾಧಾರಣ ಪ್ರತಿಭೆಯನ್ನು ಗುರುತಿಸಿ ಕೇಂಬ್ರಿಜ್‌ಗೆ ಅವನು ಬರಬೇಕೆಂದು ಒತ್ತಾಯ ಮಾಡಿ ಅದಕ್ಕೆ ಎಲ್ಲ ಸಹಾಯವನ್ನೂ ಮಾಡಿದ. ಇವನ ಔದಾರ್ಯವೂ ಕೊಂಡಾಡಲು ಅರ್ಹವಾದದ್ದೇ.

1914ರ ಏಪ್ರಿಲ್ 14ರಂದು ರಾಮಾನುಜ ಹಡಗಿನಲ್ಲಿ ಲಂಡನ್ ಸೇರಿದ. ನೆವಿಲ್ ಆತನನ್ನು ಸ್ವಾಗತಿಸಿ ಕರೆದುಕೊಂಡು ಹೋದ. ಮೊದಲ ನೆವಿಲ್ ಮನೆಯಲ್ಲಿಯೇ ವಾಸ. ರಾಮಾನುಜ ಮತ್ತೆ ವಿದ್ಯಾರ್ಥಿಯಾಗಿ ಟ್ರಿನಿಟಿ ಕಾಲೇಜ್ ಸೇರಿದ. 1669ರಲ್ಲಿ ನ್ಯೂಟನ್ ಇಲ್ಲಿಯೇ ವಿದ್ಯಾರ್ಥಿಯಾಗಿದ್ದನು. ಮುಂದೆ 30ವರ್ಷ ನ್ಯೂಟನ್ ಕೆಲಸ ಮಾಡಿದುದೂ ಇಲ್ಲಿಯೇ ಜೆ.ಜೆ. ಥಾಮ್ಸನ್, ರುದರ್ ಫೋರ್ಡ್, ಡಾರ್ವಿನ್, ವರ್ಡ್ಸ್‌ವರ್ಥ್ ಮೊದಲಾದ ಮಹಾಪುರುಷರ ಕಾಲೇಜು ಇದು.

ಆದರೆ ರಾಮಾನುಜ ಎಲ್ಲ ವಿದ್ಯಾರ್ಥಿಗಳಂತೆ ಇರಲಿಲ್ಲ. ಅವನ ಕೆಲಸ ತನ್ನ ಸತ್ಯಶೋಧನೆಯನ್ನು ಮುಂದುವರಿಸುವುದೇ. ಆದರೆ ತರಗತಿಗಳಲ್ಲಿ ಕುಳಿತು ಪಾಠ ಕೇಳಿದುದೂ ಉಂಟು - ಮೊದಲ ದಿನಗಳಲ್ಲಿ.

ಒಂದು ದಿನ ತರಗತಿಯಲ್ಲಿ ಉಪಾಧ್ಯಾಯ ಬೆರ್ರಿ ಎಂಬಾತ ಪಾಠ ಹೇಳುತ್ತಿದ್ದಾಗ ಬೋರ್ಡಿನ ಮೇಲೆ ಕೆಲವು ಪ್ರಮೇಯಗಳನ್ನು ಬರೆದು ರಾಮಾನುಜನನ್ನು 'ಅರ್ಥವಾಯಿತೆ?' ಎಂದು ಕೇಳಿದ. ಆಗ ರಾಮಾನುಜ ಬೋರ್ಡಿನ ಹತ್ತಿರ ಹೋಗಿ ಮುಂದಿನ ಕೆಲವು ವರಸೆಗಳನ್ನು ಬರೆದ. ಬೆರ್ರಿ, ಆ ಹಂತವನ್ನು ಮುಟ್ಟಿಯೇ ಇರಲಿಲ್ಲ. ಕೇಂಬ್ರಿಜಿನಲ್ಲಿ ರಾಮಾನುಜ ಪ್ರಖ್ಯಾತನಾದ.

ತನ್ನವರು ಎಂಬುವರು ಯಾರೂ ಇಲ್ಲದ ಹೊಸ ಊರಿನಲ್ಲಿ ವಿದೇಶದಲ್ಲಿ ವಾಸ, ಸಪ್ಪೆಯಾಗಿ ನಾಲಿಗೆಗೆ ರುಚಿಸದ ಊಟ, ಏಕಾಂಗಿತನ -ಇವೆಲ್ಲ ಬೇಜಾರು ಬರಿಸಿತಾದರೂ ಬೌದ್ಧಿಕವಾಗಿ ಈತ ಆನಂದದಿಂದ ಕೆಲಸ ಮಾಡುವ ಸುಸಂದರ್ಭ ಒದಗಿಸಿತು. ತಾನು ಮಾಡುವ ಕೆಲಸವನ್ನು ಅರ್ಥಮಾಡಿಕೊಂಡು ಅದರ ಆಳವನ್ನು ಅಳೆಯಬಲ್ಲ ಹಾರ್ಡಿ, ಲಿಟಲ್‌ವುಡ್‌ರಂತಹ ಪಂಡಿತರ ಸಾನ್ನಿಧ್ಯ ಆತನಿಗೆ ಪರಮಸುಖವನ್ನು ತಂದಿತು. ಅವನ ಲೇಖನಗಳು ಕೆಲವೇ ದಿನಗಳಲ್ಲಿ ಲಂಡನ್ ಗಣಿತ ಸಂಘದಲ್ಲಿ ಪ್ರೊ| ಹಾರ್ಡಿಯಿಂದ ಮಂಡಿಸಲ್ಪಟ್ಟವು.

ರಾಮಾನುಜನಿಗೆ ತಾನು ಆವಿಷ್ಕರಿಸಿದ ಕೆಲವು 'ಹೊಸ'ಪ್ರಮೇಯಗಳು ಆಗಲೇ ಇತರರಿಂದ ಕಂಡುಹಿಡಿಯಲ್ಪಟ್ಟಿದ್ದವು ಎಂಬುದೂ ತಿಳಿಯಿತು. ಆದರೆ ಹಾರ್ಡಿ ರಾಮಾನುಜನಿಂದ ಅನೇಕ ಹೊಸ ವಿಷಯಗಳನ್ನು ಕಲಿತುಕೊಂಡ ಆದುದರಿಂದ ರಾಮಾನುಜ ಮಾಮೂಲಿ ವಿದ್ಯಾರ್ಥಿಯಾಗಲಿಲ್ಲ. ಅವನಿಗೆ ತರಗತಿಗಳಲ್ಲಿ ಹಾಜರಿರಬೇಕೆಂಬ ಯಾವ ನಿರ್ಬಂಧವೂ ಇರಲಿಲ್ಲ.

ಹಾರ್ಡಿಗೆ ರಾಮಾನುಜನ ನೋಟ್ ಪುಸ್ತಕಗಳನ್ನು ನೋಡಿ ದಿಗ್ಭ್ರಮೆ ಆಯಿತು. ಸಾವಿರಾರು ಪ್ರಮೇಯಗಳು, ಸಮರ್ಥನೆಗಳು, ನಾಲ್ಕೈದು ಸಾವಿರ ಉದಾಹರಣೆಗಳು. ಆದರೆ ಎಲ್ಲಿಯೂ ವಿವರಣೆ, ಪ್ರೂಫ್‌ಗಳಿರಲಿಲ್ಲ. ರಾಮಾನುಜನ ಕುಶಾಗ್ರಮತಿಗೆ ಇವೆಲ್ಲ ಸ್ವಯಂ ಸ್ಪಷ್ಟವಾಗಿದ್ದವು. -ಎಲ್ಲ ಸೂತ್ರರೂಪದಲ್ಲಿ. ಅವುಗಳನ್ನು ಅರ್ಥೈಸಲು ಎಷ್ಟೋ ಗಣಿತಜ್ಞರ ಪೀಳಿಗೆಗಳು ಕಷ್ಟಪಡಬೇಕಾಗುತ್ತದೆ. "ಇದು ಗಣಿತದ ಐಶ್ವರ್ಯದ ಘನೀಕೃತ ಆಕರ" - ಎಂದು ಹಾರ್ಡಿ ಹೇಳಿದ್ದಾನೆ. ಇದು ಅಕ್ಷರಶಃ ಸತ್ಯ. ಇಂದಿಗೂ ಗಣಿತಜ್ಞರು ರಾಮಾನುಜನ ನೋಟ್ಸ್‌ಗಳನ್ನು ಅಧ್ಯಯನ ಮಾಡಿ ಅರ್ಥ ಮಾಡಿಕೊಳ್ಳುವ

ಪ್ರಯತ್ನದಲ್ಲಿದ್ದಾರೆ.

ಎರಡು ತಿಂಗಳ ನಂತರವೂ ಹಾರ್ಡಿಗೆ ಕೆಲವೇ ರಾಮಾನುಜನ್ ಪ್ರಮೇಯಗಳ ಪರಿಚಯ ಆಯಿತು. ಇತರ ಬಹುಭಾಗ ಹಾರ್ಡಿಗೂ ಒಗಟಾಗಿದ್ದಿತು.

ರಾಮಾನುಜನ ಇನ್ನೊಬ್ಬ ಅಧ್ಯಾಪಕ ಲಿಟಲ್‌ವುಡ್ "ಪ್ರತಿಭೆಯಲ್ಲಿ ರಾಮಾನುಜ್ ಜಾಕೋಬಿಗೆ ಸಮಾನ" ಎಂದ. ಹಾರ್ಡಿ "ಈತನ ಕಾರ್ಯ ಅದ್ಭುತ. ಇಂತಹ ಪ್ರತಿಭೆಯನ್ನು ನಾನು ಬೇರೆ ಯಾರಲ್ಲಿಯೂ ನೋಡಲಿಲ್ಲ. ಇವನನ್ನು ಆಯ್ಲರ್, ಜಾಕೋಬಿ ಇವರಿಗೆ ಮಾತ್ರ ಹೋಲಿಸಬಹುದು" ಎಂದು ಬರೆದಿದ್ದಾನೆ.

ಇವನನ್ನು ಕೇಂಬ್ರಿಜ್‌ಗೆ ಕರೆತಂದೆನಲ್ಲ ಎಂದು ಹಾರ್ಡಿಗೆ ಹೆಮ್ಮೆ ಆಯಿತು. "ಈತನನ್ನು ಕಂಡುಹಿಡಿದದ್ದು ನಾನೇ ! ಆದರೆ ಆತನ ಪ್ರತಿಭೆಗೆ ನಾನು ಕಾರಣನಲ್ಲ. ಅದು ಆತನದೇ ಸ್ವಂತ ಆಸ್ತಿ. ಇಂತಹ ಐಶ್ವರ್ಯವನ್ನು ಗುರುತಿಸಿದ ಭಾಗ್ಯ ನನ್ನದು ಎಂಬ ನೆಮ್ಮದಿ ನನಗೆ"

ರಾಮಾನುಜನ್ ಬರೆದ ಗಣಿತಕ್ಕೆ ಹಾರ್ಡಿಯ ಬರಹ ಮೆರುಗುಕೊಟ್ಟಿತು. ಆತ ಅಸಾಧಾರಣ ಚಾತುರ್ಯದ ಲೇಖಕ. ಒಂದೊಂದಾಗಿ ರಾಮಾನುಜನ ಕೃತಿಗಳನ್ನು ಹಾರ್ಡಿ ವಿವರಿಸಿ ಬರೆಯತೊಡಗಿದ.

ಆದರೆ ಮಹಾಯುದ್ಧದ ಬಿಸಿ ಇಂಗ್ಲೆಂಡಿನಲ್ಲಿ ಎಲ್ಲರಿಗೂ ತಟ್ಟುವಂತೆ ರಾಮಾನುಜನಿಗೂ ತಟ್ಟಿತು. ಲಿಟಲ್‌ವುಡ್ ಯುದ್ಧಕಾರ್ಯಕ್ಕೆ ಹೋದ. ಹಾರ್ಡಿ ಒಬ್ಬನಿಗೇ ಇಂತಹ ಮೇಧಾವಿ ವಿದ್ಯಾರ್ಥಿಗೆ ತರಬೇತು ಕೊಡುವ ಕೆಲಸ ಭಾರವಾಯಿತು.

ರಾಮಾನುಜನ್ ಇಂತಹ ಮಹಾನ್ ವಿದ್ವಾಂಸರ ಸಹವಾಸವನ್ನೇ ಬಯಸುತ್ತಿದ್ದುದು ಇದರ ಕೊರತೆಯೇ ಅವನಿಗೆ ಮದರಾಸಿನಲ್ಲಿ ಅಸಮಾಧಾನವನ್ನುಂಟುಮಾಡಿದ್ದುದು ಕೇಂಬ್ರಿಜ್‌ನಲ್ಲಿ ರಾಮಾನುಜ್ ಜೀವಧನ್ಯತೆಯನ್ನು ಅನುಭವಿಸಿತು.

ಆದರೆ ಯುದ್ಧಕಾಲದ ಜೀವನ ಕಠಿಣ ಎಲ್ಲ ವಸ್ತುಗಳ ಅಭಾವ. ಅದೂ ಶಾಕಾಹಾರಿಯಾದ ರಾಮಾನುಜನಿಗೆ ತಕ್ಕ ಹಣ್ಣು ಹಂಪಲು, ತರಕಾರಿ, ಹಾಲು ಅಪರೂಪವಾದವು.

ಆದರೆ ರಾಮಾನುಜ ತನ್ನ ಗಣಿತ ಕಾರ್ಯದಲ್ಲಿ ಮುಳುಗಿ ಹೊರಗಿನ ಪ್ರಪಂಚವನ್ನೇ ಮರೆತ. ಅವನ ಅಂತಃಸ್ಫೂರ್ತಿ ಬತ್ತಲಿಲ್ಲ. ಎಂತಹ ಜಟಿಲವಾದ ಸಮಸ್ಯೆ ಎದುರಿಗೆ ಬಂದರೂ ಅದರ ಪರಿಹಾರ ಆತನಿಗೆ ಮಿಂಚಿನಂತೆ ಹೊಳೆದು ದೃಗ್ಗೋಚರವಾಗುತ್ತಿದ್ದಿತು. ಆದರೆ ಎಲ್ಲ ಗಣಿತಜ್ಞರಿಗೂ ತಿಳಿದಿದ್ದ ವಿಷಯಗಳು ಆತನಿಗೆ ಹೊಸದಾಗಿ ಕಾಣುತ್ತಿದ್ದುದೂ ಹಾರ್ಡಿಗೆ ಆಶ್ಚರ್ಯಕಾರಕವಾಗಿದ್ದಿತು. ಗಣಿತಶಾಸ್ತ್ರದಲ್ಲಿ ಪ್ರಮಾಣೀಕರಣ (ಪ್ರೂಫ್) ಹೇಗೆ ಮಾಡಬೇಕು ಎಂಬುದೂ ರಾಮಾನುಜನಿಗೆ ತಿಳಿಯದು. ಅದರ ಅಗತ್ಯವೇ ಅವನಿಗೆ ಕಂಡಿರಲಿಲ್ಲ ! ಅವನಿಗೆ ಎಲ್ಲ ಸ್ವಯಂಸಿದ್ಧವಾದದ್ದು. ಆದರೆ ಅದನ್ನು ಇತರರಿಗೆ ತೋರಿಸುವ ರೀತಿಯನ್ನು ಈಗ ಹಾರ್ಡಿ ಅವನಿಗೆ ಬೋಧಿಸಲು ಯತ್ನಿಸಿದ.

ಆದರೂ ಹಾರ್ಡಿಯ ಅಳತೆಯ ಪ್ರಕಾರ ತನ್ನ ಜ್ಞಾನಕ್ಕೆ 25ಮಾರ್ಕುಗಳನ್ನು ಕೊಟ್ಟರೆ ಲಿಟಲ್‌ವುಡ್‌ಗೆ 30 ಕೊಡಬಹುದು. ಆಗಿನ ಕಾಲದ ಅತಿಶ್ರೇಷ್ಠ ಗಣಿತಜ್ಞ ಗಿಲ್ಬರ್ಟ್‌ಗೆ 80ನಂಬರು. ರಾಮಾನುಜನಿಗೆ? ನೂರಕ್ಕೆ ನೂರು!

ಹಾರ್ಡಿಯ ಶ್ರಮ, ಔದಾರ್ಯಗಳಿಂದಾಗಿ ಒಂದೇ ವರ್ಷದಲ್ಲಿ ರಾಮಾನುಜನ್ ಇಂಗ್ಲೆಂಡಿನಲ್ಲೆಲ್ಲ ಖ್ಯಾತನಾದ. ಇದು ರಾಮಾನುಜನಿಗೆ ಕೃತಕೃತ್ಯತೆಯ ಅನುಭವವನ್ನು ಕೊಟ್ಟಿತು. ಕೇಂಬ್ರಿಜ್‌ನ ಭಾರತೀಯ ವಿದ್ಯಾರ್ಥಿಗಳಿಗೆಲ್ಲ ಅವನಿಂದ ಹೆಮ್ಮೆ ಬರುವಂತಾಯಿತು. ಇವರಲ್ಲಿ ಪಾಸಿ. ಡಿ ದೇಶ್‌ಮುಖ್ ಒಬ್ಬರು.

1916ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯ ರಾಮಾನುಜನಿಗೆ ಆತನ ಸಂಶೋಧನೆಗಾಗಿ ಬಿ.ಎ. ಡಿಗ್ರಿ ದಯ ಪಾಲಿಸಿತು. ಇದೂ ರಾಮಾನುಜನಿಗೆ ಸಮಾಧಾನ ಉಂಟುಮಾಡಿತು. ಆದರೆ ಆತನ ಜೀವನಕ್ರಮ ದುಸ್ತರವಾಗಿತ್ತು. ಸ್ವಯಂಪಾಕ ಯಾವಾಗಲೋ ಮನ ಬಂದಾಗ ಊಟ, ಇಲ್ಲವಿದ್ದರೆ ಉಪವಾಸ. ಮಾಂಸಾಹಾರವನ್ನು ದೂರದಿಂದ ನೋಡಿದರೂ ಅವನಿಗೆ ವಾಕರಿಕೆ ಬರುತ್ತಿತ್ತು. ಆ ದೇಶದ ಚಳಿಯೂ ಅವನನ್ನು ನಡುಗಿಸಿತು. ಹಾರ್ಡಿಯನ್ನು ಬಿಟ್ಟರೆ ಬೇರೆ ಯಾವ ಸ್ನೇಹಿತರೂ ಇಲ್ಲ. ಆತನೂ ಎಷ್ಟಾದರೂ ವಿದೇಶಿಯ. ಹೀಗೆ ತನ್ನ ಜೀವನದ ಅತಿ ಭವ್ಯತೆಯ ದಿನಗಳೇ ಆತನ ಅಂತ್ಯಕ್ಕೂ ಕಾರಣವಾಯಿತು.

1917ರಲ್ಲಿ ಆತನಿಗೆ ಖಾಯಿಲೆ ಅಂಟಿತು. ರಾಮಾನುಜ ಹಠಮಾರಿ. ಸರಿಯಾದ ಔಷಧಿಯನ್ನು ತೆಗೆದುಕೊಳ್ಳಲಿಲ್ಲ. ಪ್ರೀತಿಯಿಂದ ಒಲಿಸಿ ಬಡಿಸುವ ತಾಯಿ, ಪತ್ನಿಯರೂ ನೆರವಿಗೆ ಇರಲಿಲ್ಲ.

ಅನೇಕ ಪರೀಕ್ಷೆಗಳಾದ ನಂತರ ರಾಮಾನುಜನಿಗೆ ಕ್ಷಯರೋಗ ಬಂದಿದೆ ಎಂದು ನಿಶ್ಚಯ ಆಯಿತು. ಆಗ ಈ ಖಾಯಿಲೆಗೆ ಯಾವ ಮದ್ದೂ ಇರಲಿಲ್ಲ. ಒಳ್ಳೆಯ ಆರೈಕೆಯ ಅಗತ್ಯ ಇತ್ತು. ಅದು ದೊರೆಯುವಂತೆ ಇರಲಿಲ್ಲ. ಆಸ್ಪತ್ರೆಗಳಲ್ಲಿ ಪಡಬಾರದ ಪಾಡು ಪಟ್ಟ ರಾಮಾನುಜ ಆತ್ಮಹತ್ಯೆಗೂ ಪ್ರಯತ್ನಿಸಿ ವಿಫಲನಾದ.

ಒಂದು ದಿನ ಹಾರ್ಡಿ ರಾಮಾನುಜನನ್ನು ಭೇಟಿ ಮಾಡಲು ಆಸ್ಪತ್ರೆಗೆ ಬಂದಾಗ ತಾನು ಬಂದ ಟ್ಯಾಕ್ಸಿಯ ನಂಬರ್ 1729 ಆಗಿತ್ತೆಂದೂ, ಇದು ಯಾವ ವೈಶಿಷ್ಟ್ಯವನ್ನೂ ಹೊಂದದ ಸಾಮಾನ್ಯ ಸಂಖ್ಯೆ ಎಂದೂ ಹೇಳಿದ. ಆ ಕ್ಷಣವೇ ರೋಗಿ ರಾಮಾನುಜ ಉತ್ಸಾಹದಿಂದ ""ಇಲ್ಲ, ಇಲ್ಲ. ಅದು ಒಂದು ಅತಿ ಸ್ವಾರಸ್ಯಕರ ಸಂಖ್ಯೆ. ಎರಡು ಕ್ಯೂಬ್‌ಗಳ ಮೊತ್ತವಾಗಿ ಎರಡು ಬೇರೆ ಬೇರೆ ರೀತಿಯಲ್ಲಿ ಬರೆಯಬಹುದಾದ ಕನಿಷ್ಠ ಸಂಖ್ಯೆ ಅದು !"ಎಂದನಂತೆ. ಎಂದರೆ 1729=13+123=93+103.ಪ್ರತಿ ಸಂಖ್ಯೆಯ ನಿಕಟ ಪರಿಚಯ ಅವನಿಗೆ ಇತ್ತು.

1917ರಲ್ಲಿ ಹಾರ್ಡಿ ರಾಮಾನುಜನನ್ನು ಲಂಡನ್ನಿನ ಗಣಿತ ಸಂಘದ ಸದಸ್ಯನನ್ನಾಗಿ ಆಯ್ಕೆ ಮಾಡಿಸಿದ. ಅದೇ ವರ್ಷವೇ ಆತನಿಗೆ ಎಫ್.ಆರ್.ಎಸ್. (ಫೆಲೋ ಆಫ್ ರಾಯಲ್ ಸೊಸೈಟಿ) ಪದವಿ ದೊರೆಯಿತು. ಇದು ವಿಶ್ವದಲ್ಲೇ ಅತಿ ಹೆಚ್ಚಿನ ಘನತೆಯ ವೈಜ್ಞಾನಿಕ ಪದವಿ. ನೊಬೆಲ್ ಬಹುಮಾನವೂ ಇದಕ್ಕೆ ಸಮನಾಗಬಹುದೋ ಇಲ್ಲವೋ ! ಈ ಪಟ್ಟ ದೊರೆತದ್ದು ರಾಮಾನುಜನಿಗೆ ಹೆಮ್ಮೆ ತಂದಿತ್ತು. ಇದಕ್ಕೆ ರಾಮಾನುಜ ಹಾರ್ಡಿಗೆ ಹೃದಯ ಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸಿದ. ಆಮೇಲೆ ಟ್ರಿನಿಟಿ ಕಾಲೇಜಿನ ಫೆಲೋಷಿಪ್ ದೊರೆಯಿತು. ಇದೆಲ್ಲಾ ಆದಾಗ ಆತನಿಗೆ ಮೂವತ್ತೇ ವರ್ಷ ವಯಸ್ಸು !

ರಾಮಾನುಜ ಬರೆದ ಗಣಿತದ ಕೆಲಸವನ್ನೊಳಗೊಂಡ ನೋಟ್ ಪುಸ್ತಕಗಳು, ಅವುಗಳ ಅಧ್ಯಯನ ಗಣಿತಶಾಸ್ತ್ರದ ಚರಿತ್ರೆಯಲ್ಲಿ ಅದರ ಸ್ಥಾನ -ಇವೆಲ್ಲ ಒಂದು ಅತಿ ಸ್ವಾರಸ್ಯಕರ, ರಮಣೀಯದ ಅಧ್ಯಾಯ ಇಂದೂ ಸಹ ಗಣಿತಜ್ಞರು ರಾಮಾನುಜನ ನೋಟ್ ಪುಸ್ತಕಗಳ ಅಧ್ಯಯನ ನಡೆಸುತ್ತಿದ್ದಾರೆ !ಈ ಪುಸ್ತಕಗಳು ಕಣ್ಮರೆಯಾಗಿದ್ದು ಮತ್ತೆ ಬೆಳಕನ್ನು ಕಂಡ ಕಥೆಯೂ ಅದ್ಭುತವಾದುದೇ.

1919ರಲ್ಲಿ ಖಾಯಿಲೆಯ ದೆಸೆಯಿಂದ

ರಾಮಾನುಜ ಪುನಃ ಸ್ವದೇಶಕ್ಕೆ ಬಂದು ಬಂಧು-ಮಿತ್ರರ ಪ್ರೀತ್ಯಾದರಗಳನ್ನು ಅನುಭವಿಸಿದ. "ತಾನೇ ಎಫ್.ಆರ್.ಎಸ್. ಪಡೆದ ಪ್ರಥಮ ಭಾರತೀಯ ಎಂಬುದರ ಅರಿವು ಇದ್ದರೂ ಅತನಿಗೆ ಗರ್ವ ಇರಲಿಲ್ಲ. ನಮ್ರತೆ ಅತನ ಸ್ವಭಾವ ಇವನಂತಹ ಮಹದೈಶ್ವರ್ಯವನ್ನು ಭಾರತ ಗುರುತಿಸಿ ಮನ್ನಿಸಲಿ" - ಎಂದು ಹಾರ್ಡಿ ಮದರಾಸು ವಿಶ್ವವಿದ್ಯಾಲಯಕ್ಕೆ ಬರೆದ. ಮದರಾಸು ವಿಶ್ವವಿದ್ಯಾಲಯ ಅವನನ್ನು ಗೌರವದಿಂದ ಬರಮಾಡಿಕೊಂಡಿತು. ಉದಾರಿ ರಾಮಾನುಜ ತನ್ನಲ್ಲಿದ್ದ ಹಣವನ್ನು ಬಡವಿದ್ಯಾರ್ಥಿಗಳ ಸಹಾಯನಿಧಿಗಾಗಿ ವಿಶ್ವವಿದ್ಯಾಲಯಕ್ಕೆ ಕೊಟ್ಟನು.

ಏನೇನೋ ಚಿಕಿತ್ಸೆಗಳು ಸ್ಥಳ ಬದಲಾವಣೆಗಳು ಆದರ, ಆರೈಕೆಗಳು ("ಇಂತಹ [ಸಾಂಬಾರ್, ಮೊಸರನ್ನ] ಊಟ ನನಗೆ ಇಂಗ್ಲೆಂಡಿನಲ್ಲಿ ದೊರೆತಿದ್ದರೆ ನಾನು ಹೀಗೆ ರೋಗಕ್ಕೆ ತುತ್ತಾಗುತ್ತಿರಲಿಲ್ಲ"), ಪ್ರೀತಿಯ ಹೆಂಡತಿಯ ಸಾನ್ನಿಧ್ಯ, ಇದು ಯಾವುದೂ ಫಲಿಸದೆ 1920ರ ಎಪ್ರಿಲ್ 26ರಂದು ರಾಮಾನುಜನ್ ಜೀವನ ಕೊನೆಗೊಂಡಿತು. ಆಗ ಅವನಿಗೆ 32 ವರ್ಷ.

ಶ್ರೀನಿವಾಸ ರಾಮಾನುಜನ್ ಭಾರತದಲ್ಲಿದ್ದಾಗಲೇ ಬರೆದಿದ್ದ ಎರಡು ಪರಿಶೋಧನ ಲೇಖ ಸಂಗ್ರಹಗಳನ್ನು **1956**ರಲ್ಲಿ ಮುಂಬಯಿಯ ತಾತಾ ಮೂಲ ವಿಜ್ಞಾನ ಸಂಸ್ಥೆ ಪ್ರಕಟಿಸಿತು. ಅವಲ್ಲದೆ ಇತರ ಹಲವಾರು ಕೈಬರಹದ ಪುಸ್ತಕಗಳೂ ಇದ್ದವೆನ್ನಲು ದಾಖಲೆಯಿದೆ. ಆದರೆ ಅದಾವುದೂ ಬೆಳಕಿಗೆ ಬಂದಿಲ್ಲ. **1914**ರಿಂದ **1918**ರ ವರೆಗಿನ ಅವಧಿಯ ರಾಮಾನುಜನ್ ಬರಹಗಳು ಪ್ರಕಟಿತ ರೂಪದಲ್ಲಿ ಭಾರತೀಯರಿಗೆ ಲಕ್ಷ್ಯವಾದದ್ದು **1979-80**ರಷ್ಟು ಈಚೆಗೆ.

**1925**ರಲ್ಲಿ ಡಾ| ಎಸ್. ಆರ್. ರಂಗನಾಥ್‌ನರ ಪ್ರಯತ್ನದ ಫಲವಾಗಿ ಹಾರ್ಡಿಯವರಲ್ಲಿದ್ದ ರಾಮಾನುಜನ್‌ರ ಎರಡು ಪುಸ್ತಕಗಳನ್ನು ಮದರಾಸು ವಿಶ್ವವಿದ್ಯಾನಿಲಯ ಹಾರ್ಡಿಯವರಿಂದ ಪಡೆದುಕೊಂಡಿತು. ಆದರೆ ಇದಲ್ಲದೆ ರಾಮಾನುಜನ್‌ರ ಇತರ ಕೆಲವು ಬರಹಗಳೂ ಹಾರ್ಡಿಯವರಲ್ಲಿ ಇದ್ದವೆಂದೂ ಅವನ್ನು ರಾಮಾನುಜನ್ ನಿಧನಾನಂತರ ಭಾರತಕ್ಕೆ ಕಳಿಸಲು ಹಾರ್ಡಿ 'ಮರೆತಿದ್ದ'ರೆಂದೂ ಸಾಕ್ಷ್ಯಪಟ್ಟಿದೆ.

# ಕರ್ನಾಟಕದ ಆದರ್ಶನಾರಿ ಅತ್ತಿಮಬ್ಬೆ

ಕೆಲವರು ತಮ್ಮ ಶೀಲ-ಚಾರಿತ್ರ್ಯಗಳಿಂದ ಶ್ರೇಷ್ಠ ವ್ಯಕ್ತಿಗಳಾಗುತ್ತಾರೆ; ಇನ್ನು ಕೆಲವರು ಸಾಹಸ ಪರಾಕ್ರಮಗಳಿಂದ ಅಮರರಾಗುತ್ತಾರೆ; ಮತ್ತೆ ಕೆಲವರು ದಾನ-ಧರ್ಮ ವ್ರತಾಚರಣೆಗಳಿಂದ ಸಾಮಾಜಿಕ ಜೀವನದಲ್ಲಿ ಸಾತ್ತ್ವಿಕತೆಯನ್ನು ತುಂಬುತ್ತ ವಂದ್ಯರಾಗುತ್ತಾರೆ. ಆದರೆ ಈ ಎಲ್ಲ ಗುಣಗಳು ಒಂದೇ ವ್ಯಕ್ತಿಯಲ್ಲಿ ಸಮಾವಿಷ್ಟವಾಗಿರುವುದು ತೀರಾ ವಿರಳ. ಹಾಗೊಮ್ಮೆ ಈ ಎಲ್ಲ ಶ್ರೇಷ್ಠಗುಣಗಳು ಒಂದೆಡೆಯೇ ಕಾಣುವುದಾದರೆ ಅದು `ಭುವನದ ಭಾಗ್ಯ'ವೇ ಸರಿ. ಇಂಥ ಭುವನದ ಭಾಗ್ಯವೆನ್ನ ಬಹುದಾದ ಭವ್ಯವ್ಯಕ್ತಿತ್ವವನ್ನು ಪಡೆದಿದ್ದವಳು, ದಾನಚಿಂತಾಮಣಿಯೆಂದೇ ಸ್ತುತಿಗೆ ಪಾತ್ರಳಾಗಿರುವ ಅತ್ತಿಮಬ್ಬೆ.

ಜಗತ್ತಿನ ಅಪೂರ್ವ ಸ್ತ್ರೀಯರ ಸಾಲಿನಲ್ಲಿ ನಿಲ್ಲುವ ವೀರನಾರಿ ಅತ್ತಿಮಬ್ಬೆ ಜೀವಿಸಿದ್ದುದು ಇಂದಿಗೆ ಸಾವಿರ ವರ್ಷಗಳ ಹಿಂದೆ, ಕ್ರಿ.ಶ. ಹತ್ತನೆ ಶತಮಾನದಲ್ಲಿ. ಕವಿಚಕ್ರವರ್ತಿ ರನ್ನನು ವರ್ಣಿಸಿರುವಂತೆ ಭೂತಿಲಕ ಪವಿತ್ರೆಯೂ, ಗುಣಪವಿತ್ರೆಯೂ, ಮಹಾಸತಿಯರಲ್ಲಿ ತಿಲಕಪ್ರಾಯಳೂ ಆದ ಅತ್ತಿಮಬ್ಬೆಯದು ಕರ್ನಾಟಕದ ಸಾಹಿತ್ಯ-ಸಂಸ್ಕೃತಿ, ರಾಜಕೀಯ-ಧಾರ್ಮಿಕ ಇತಿಹಾಸದಲ್ಲಿ ಗಣ್ಯ ಹೆಸರು.

ಕರ್ನಾಟಕವನ್ನು ಆಳಿದ ಪ್ರಸಿದ್ಧ ರಾಜವಂಶಗಳ ಪೈಕಿ ಚಾಲುಕ್ಯ ರಾಜವಂಶವೂ ಒಂದು. ಚಾಲುಕ್ಯರ ತೈಲಪ ಚಕ್ರವರ್ತಿಯ ದಂಡನಾಯಕನಾಗಿದ್ದ ಮಲ್ಲಪಯ್ಯ ಅತ್ತಿಮಬ್ಬೆಯ ತಂದೆ. ಇದೇ ದೊರೆಯ ಸೇನಾಪತಿಯಾಗಿದ್ದ ಪುನ್ನಮಯ್ಯ ಈಕೆಯ ಚಿಕ್ಕಪ್ಪ. ಚಾಲುಕ್ಯ ರಾಜಸಭೆಯ ಮಹಾಮಂತ್ರಿ ಧಲ್ಲಪಯ್ಯನು ಈಕೆಯ ಮಾವ. ಅತ್ತಿಮಬ್ಬೆಯ ಪತಿ ನಾಗದೇವನೂ ಸಾಮಾನ್ಯನೇನಲ್ಲ. ಆತ ಶೂರ ಸೇನಾನಿಯಾಗಿ ಹಲವು ಯುದ್ಧಗಳಲ್ಲಿ ಹೋರಾಡಿದ ರಾಜನೀತಿಜ್ಞ. ಅತ್ತಿಮಬ್ಬೆಯ ಒಡಹುಟ್ಟಿದವರಾದ ಗುಂಡಮಯ್ಯ, ಎಳಮಯ್ಯ, ಆಹವಮಲ್ಲ, ಎಲ್ಲರು ಕೂಡ ಸ್ವಾಮಿ ಭಕ್ತಿಗೆ ಹೆಸರಾದವರು; ರಾಷ್ಟ್ರ ರಕ್ಷಣೆಗೆ ಜೀವತೇದವರು. ಈಕೆಯ ಮಗ ಅಣ್ಣಿಗದೇವನೂ ಸೇನಾಪತಿಯಾಗಿ ತನ್ನ ಸಮರಕೌಶಲವನ್ನು ತೋರಿದವನೇ.

ಹೀಗೆ ಅತ್ತಿಮಬ್ಬೆ ಜನಿಸಿದ ಮತ್ತು ಸೇರಿದ ಎರಡೂ ಮನೆತನಗಳೂ ಕನ್ನಡನಾಡಿನ ರಾಜಮನೆತನದ ಹಿತರಕ್ಷಣೆಗೂ ಧರ್ಮ, ಸಾಹಿತ್ಯ-ಸಂಸ್ಕೃತಿಗಳ ಏಳಿಗೆಗೂ ಶ್ರಮಿಸಿದವೇ. ಅತ್ತಿಮಬ್ಬೆಯ ತಂದೆ ಮತ್ತು ಚಿಕ್ಕಪ್ಪ ಕೂಡ ಸಾಹಿತ್ಯಪೋಷಕರಾಗಿದ್ದರು. ಅವರು ಪೊನ್ನಕವಿಯಿಂದ `ಶಾಂತಿಪುರಾಣ'ವೆಂಬ ಕಾವ್ಯವನ್ನು ಬರೆಯಿಸಿದ್ದರು. ಮನೆತನದ ಈ ಉಜ್ವಲ ಪರಂಪರೆಯನ್ನು ಮುಂದುವರಿಸಿದ ಕೀರ್ತಿ ಅತ್ತಿಮಬ್ಬೆಯದು. ಆಕೆ ಕನ್ನಡದ ಮೇರುಕವಿ ರನ್ನನಿಗೆ ಆಶ್ರಯವಿತ್ತವಳು, ಆತನಿಗೆ ಅಜಿತಸೇನಾಚಾರ್ಯರಲ್ಲಿ ವಿದ್ಯಾರ್ಜನೆಗೆ ಅನುವು ಮಾಡಿಕೊಟ್ಟವಳು, ಮುಂದೆ ಆತನಿಂದ `ಅಜಿತಪುರಾಣ'ಎಂಬ ಶ್ರೇಷ್ಠ ಕಾವ್ಯವನ್ನು ಬರೆಸಿದಳು ಎಂಬ ಸಂಗತಿಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷ ಮಹತ್ತ್ವವನ್ನು ಪಡೆದಿವೆ.

ಅತ್ತಿಮಬ್ಬೆ ಕವಿಜನರಿಗೆ ಆಶ್ರಯದಾತೆಯಷ್ಟೆ ಅಲ್ಲ, ಆಕೆ ಶೌರ್ಯ-ಸಾಹಸಗಳಿಗೆ ಹೆಸರಾದವಳೂ ಕೂಡ. ಬಾಲ್ಯದಿಂದಲೇ ಕುದುರೆಸವಾರಿ, ಬಿಲ್ಲುವಿದ್ಯೆ, ಕತ್ತಿವರಸೆಯಲ್ಲಿ ನಿಪುಣೆಯಾಗಿದ್ದ ಅತ್ತಿಮಬ್ಬೆ ವೀರ ಉಡುಗೆ ತೊಟ್ಟು ಶಸ್ತ್ರಸಜ್ಜಿತಳಾಗಿ ಕುದುರೆಯೇರಿ ರಣರಂಗದಲ್ಲಿ ಛಲದಿಂದ ಹಲವುಬಾರಿ ಗಂಡನೊಡಗೂಡಿ ಯುದ್ಧಗಳಲ್ಲಿ ಹೋರಾಡಿದ್ದಳು. ಹೀಗೆ ಸಮರಭೂಮಿಯನ್ನು ಪ್ರವೇಶಿಸಿದ ಕನ್ನಡದ ಮೊದಲ ವೀರಮಹಿಳೆ ಅತ್ತಿಮಬ್ಬೆಯೇ ಎನ್ನಬಹುದು. ಇದನ್ನು ಕುರಿತೇ ರನ್ನ 'ಕೆಲದೊಳ್ ರಂಜಿಪರೆ ಮೀಸೆವೊತ್ತ್ರಣ್ಣಂಗಳ್' ಎಂದು ಕೊಂಡಾಡಿರುವುದು.

ಅತ್ತಿಮಬ್ಬೆ ಶ್ರೀಮಂತ ಮನೆಯಲ್ಲಿ ಜನಿಸಿದರೂ ಅಷ್ಟೇ ಸಿರಿವಂತಿಕೆಯ ಮನೆಗೆ ಸೊಸೆಯಾದರೂ ಆಡಂಬರವಿಲ್ಲದ, ಸ್ವಚ್ಛ, ಶುಭ್ರ ಜೀವನ ನಡೆಸಿದಳು. ಯುದ್ಧವೊಂದರಲ್ಲಿ ಪತಿನಾಗದೇವನು ವೀರಮರಣವನ್ನಪ್ಪಿದಾಗ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆ ಪತಿ ನಾಗದೇವನೊಡನೆ ಸಹಗಮನ ಮಾಡಿ ಮಹಾಸತಿಯಾದಳು. (ಅತ್ತಿಮಬ್ಬೆ-ಗುಂಡಮಬ್ಬೆ ಅವಳಿಮಕ್ಕಳು; ಇಬ್ಬರೂ ನಾಗದೇವನನ್ನು ವರಿಸಿದ್ದರು) ಪತಿದೈವ ಇಲ್ಲವಾದ ಮೇಲೆ ಅತ್ತಿಮಬ್ಬೆಯ ಜೀವನ ರೀತಿಯೇ ಬದಲಾಯಿತು. ಮಗ ಅಣ್ಣಿಗದೇವನನ್ನು ಸಲಹುತ್ತ ಪರಮಾರ್ಥ ಸಾಧನೆಗೆ ಜೈನವ್ರತನಿಷ್ಠೆಯ ದೀಕ್ಷೆಯನ್ನು ತೊಟ್ಟಳು. ಭೋಗ-ವೈಭವಗಳಿಂದ ದೂರಸರಿದು, ಚಾಂಚಲ್ಯವನ್ನು ನಿಗ್ರಹಿಸಿ, ದೇಹದಂಡನೆ ಮಾಡಿದಳು. ದಾನ, ಪೂಜೆ, ಉಪವಾಸಗಳನ್ನು ಅವನರತ ಕೈಗೊಂಡು ತಪಸ್ವಿನಿಯಾದಳು. ಪರಮಸಾತ್ತ್ವಿಕ ಬದುಕನ್ನು ನಡೆಸಿದಳು.

(ಆಧಾರ)

# STRANGE COINCIDENCES

Emile Deschamps (1791-1871), distingushed poet... tells of a curious series of fortuitous coincidences s follows:

In his childhood, being at a boarding-school at Orleans, he chanced to find himself on a certain day at table with a M. de Fortgibu, an emigre recently returned from England, who made him taste a plum pudding, a dish almost unknown at that time in France.

The remembrance of that feast had by degrees faded from his memory, when, ten years later, passing by a restaurant on the Boulevard Poissoniere, he perceived inside it a plum pudding of most excellent appearance.

He went in asked for a slice of it, but was informed that the whole had been ordered by another customer. M. de Fortgibu, cried the dame du comptoir, seeing that Deschamps looked disappointed, would you have the goodness to share your plum pudding with this gentleman ?

